ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1084
ಸದಸ್ಯರ ಹೆಸರು	:	ಡಾ॥ ಕೆ. ಅನ್ನದಾನಿ
ಉತ್ತರಿಸುವ ದಿನಾಂಕ	:	14.12.2018
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

(1)

ಕ್ರ. ಸಂ.	ಪ್ರಶ್ನೆ	ಉತ್ತರ	Answer
ಅ)	ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಖಾಸಗಿ ಜಮೀನನ್ನು ಖರೀದಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ ಫಲಾನುಭವಿಗಳಿಗೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು ಭೂ ಒಡೆತನ ಯೋಜನೆ ಈಗಾಗಲೇ ಜಾರಿಯಲ್ಲಿದೆ.	Yes Already LPS Scheme is in force.
ಆ)	ಇದ್ದಲ್ಲಿ, ಈಗಾಗಲೇ ಜಿಲ್ಲಾವಾರು ಎಷ್ಟು ಎಕರೆ ಜಮೀನು ಖರೀದಿಸಲಾಗಿದೆ ಹಾಗೂ ಎಷ್ಟು ಫಲಾನುಭವಿಗಳಿಗೆ ವಿತರಿಸಲಾಗಿದೆ (ವಿವರ ಒದಗಿಸುವುದು)?	ವಿವರಗಳನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ.	Details are furnished in annexure 1&2

ಸಂಖ್ಯೆ: ಸಕಇ 548 ಎಸ್‌ಡಿಸಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು

ಅನುಬಂಧ-I

ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಡಾ|| ಕೆ.ಅನ್ನದಾನಿ(ಮಳವಳ್ಳಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1084ಕ್ಕೆ ಉತ್ತರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2014-15		2015-16		2016-17		2017-18		2018-19	
		ಫಲಾನುಭವಿಗಳ ಸಂಖ್ಯೆ	ಖರೀದಿಸಿದ ಒಟ್ಟು ವಿಸ್ತೀರ್ಣ(ಎಕರೆಗಳಲ್ಲಿ)	ಫಲಾನುಭವಿಗಳ ಸಂಖ್ಯೆ	ಖರೀದಿಸಿದ ಒಟ್ಟು ವಿಸ್ತೀರ್ಣ(ಎಕರೆಗಳಲ್ಲಿ)	ಫಲಾನುಭವಿಗಳ ಸಂಖ್ಯೆ	ಖರೀದಿಸಿದ ಒಟ್ಟು ವಿಸ್ತೀರ್ಣ(ಎಕರೆಗಳಲ್ಲಿ)	ಫಲಾನುಭವಿಗಳ ಸಂಖ್ಯೆ	ಖರೀದಿಸಿದ ಒಟ್ಟು ವಿಸ್ತೀರ್ಣ(ಎಕರೆಗಳಲ್ಲಿ)	ಫಲಾನುಭವಿಗಳ ಸಂಖ್ಯೆ	ಖರೀದಿಸಿದ ಒಟ್ಟು ವಿಸ್ತೀರ್ಣ(ಎಕರೆಗಳಲ್ಲಿ)
	ಬೆಂಗಳೂರು ವಿಭಾಗ										
1	ಬೆಂಗಳೂರು ಗ್ರಾಮಾಂತರ	0	0.00	0	0.00	1	1.02	0	0.00	0	0.00
2	ಬೆಂಗಳೂರು ನಗರ	0	0.00	0	0.00	0	0.00	0	0.00	0	0.00
3	ಚಿಕ್ಕಬಳ್ಳಾಪುರ	6	10.08	85	136.15	29	46.22	37	60.21	0	0.00
4	ಚಿತ್ರದುರ್ಗ	0	0.00	2	4.00	11	22.00	23	44.32	0	0.00
5	ದಾವಣಗೆರೆ	0	0.00	31	32.00	2	3.35	9	19.16	0	0.00
6	ಕೋಲಾರ	1	2.00	76	132.08	16	22.21	21	39.14	0	0.00
7	ರಾಮನಗರ	0	0.00	0	0.00	6	11.00	8	6.24	0	0.00
8	ಶಿವಮೊಗ್ಗ	0	0.00	9	10.14	0	0.00	0	0.00	0	0.00
9	ತುಮಕೂರು	0	0.00	3	6.00	4	6.07	6	12.00	0	0.00
	ಒಟ್ಟು-1	**7**	**12.08**	**206**	**320.37**	**69**	**111.87**	**104**	**181.07**	**0**	**0.00**
	ಬೆಳಗಾವಿ ವಿಭಾಗ										
10	ಬಾಗಲಕೋಟೆ	0	0.00	98	101.28	133	130.01	282	323.12	1	1.00
11	ಬೆಳಗಾಂ	4	4.00	10	16.00	40	52.30	83	112.33	2	3.00
12	ಬಿಜಾಪುರ	20	20.00	117	120.32	63	89.20	211	274.37	0	0.00
13	ಧಾರವಾಡ	0	0.00	37	90.18	10	25.03	11	22.31	3	6.15
14	ಗದಗ	0	0.00	56	109.29	38	69.13	118	232.36	0	0.00
15	ಹಾವೇರಿ	0	0.00	1	2.00	14	26.21	6	11.00	1	2.01
16	ಉತ್ತರ ಕನ್ನಡ	0	0.00	0	0.00	0	0.00	0	0.00	0	0.00
	ಒಟ್ಟು-2	**24**	**24.00**	**319**	**439.07**	**298**	**391.88**	**711**	**976.09**	**7**	**12.16**
	ಕಲಬುರಗಿ ವಿಭಾಗ										
17	ಬಳ್ಳಾರಿ	0	0.00	0	0.00	26	18.36	50	51.36	0	0.00
18	ಬೀದರ್	0	0.00	28	56.00	2	4.00	28	57.25	2	4.00
19	ಗುಲ್ಬರ್ಗಾ	0	0.00	238	414.10	386	551.31	178	270.19	0	0.00
20	ಕೊಪ್ಪಳ	0	0.00	0	0.00	0	0.00	108	202.35	1	1.32
21	ರಾಯಚೂರು	0	0.00	188	187.16	88	84.34	682	683.16	9	9.00
22	ಯಾದಗಿರಿ	0	0.00	21	22.02	126	127.25	128	156.17	157	147.21
	ಒಟ್ಟು-3	**0**	**0.00**	**475**	**679.28**	**628**	**785.26**	**1174**	**1326.21**	**169**	**162.13**
	ಮೈಸೂರು ವಿಭಾಗ										
23	ಚಾಮರಾಜನಗರ	2	2.00	55	69.24	6	9.17	60	90.03	0	0.00
24	ಚಿಕ್ಕಮಗಳೂರು	0	0.00	4	7.00	6	6.00	1	0.00	0	0.00
25	ದಕ್ಷಿಣ ಕನ್ನಡ	0	0.00	0	0.00	0	0.00	0	0.00	0	0.00
26	ಹಾಸನ	0	0.00	23	26.29	5	5.35	0	0.00	0	0.00
27	ಕೊಡಗು	0	0.00	1	1.82	3	3.30	0	0.00	0	0.00
28	ಮಂಡ್ಯ	2	2.00	20	20.07	16	12.05	12	9.15	0	0.00
29	ಮೈಸೂರು	0	0.00	14	15.08	9	8.04	24	28.35	0	0.00
30	ಉಡುಪಿ	0	0.00	0	0.00	0	0.00	0	0.26	0	0.00
	ಒಟ್ಟು-4	**4**	**4.00**	**117**	**139.50**	**45**	**43.91**	**97**	**128.39**	**0**	**0.00**
	ಒಟ್ಟು (1+2+3+4)	**35**	**5696.58**	**1117**	**1578.22**	**1040**	**1332.92**	**2086**	**2611.15**	**176**	**174.29**

2

ಅನುಬಂಧ–2

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

2013–14ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಭೂ ಒಡೆತನ ಯೋಜನೆಯಡಿ ಸೌಲಭ್ಯ ಕಲ್ಪಿಸಲಾದ ಫಲಾನುಭವಿಗಳ ವಿವರ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ	2013–14		2014–15		2015–16		2016–17		2017–18	
		ಫಲಾನು ಭವಿಗಳ ಸಂಖ್ಯೆ	ಜಮೀನಿನ ಒಟ್ಟು ವಿಸ್ತೀರ್ಣ	ಫಲಾನು ಭವಿಗಳ ಸಂಖ್ಯೆ	ಜಮೀನಿನ ಒಟ್ಟು ವಿಸ್ತೀರ್ಣ	ಫಲಾನು ಭವಿಗಳ ಸಂಖ್ಯೆ	ಜಮೀನಿನ ಒಟ್ಟು ವಿಸ್ತೀರ್ಣ	ಫಲಾನು ಭವಿಗಳ ಸಂಖ್ಯೆ	ಜಮೀನಿನ ಒಟ್ಟು ವಿಸ್ತೀರ್ಣ	ಫಲಾನು ಭವಿಗಳ ಸಂಖ್ಯೆ	ಜಮೀನಿನ ಒಟ್ಟು ವಿಸ್ತೀರ್ಣ
1	ರಾಯಚೂರು	135	135.15	64	51.24	52	54.00	163	177.22	57	50–23
2	ಚಿಕ್ಕಬಳ್ಳಾಪುರ	48	58.04	9	10.00	74	121.01	34	52.25	13	13–30
3	ಕೋಲಾರ	42	53.19	1	2.00	6	10.18	4	4.35	2	3–05
4	ಬಾಗಲಕೋಟೆ	18	20.02	1	2.00	0	0.00	23	22.07	9	9–11
5	ಧಾರವಾಡ	11	22.00	3	6.00	32	42.34	16	29.32	2	4–00
6	ಚಿತ್ರದುರ್ಗ	2	4.00							6	8–00
7	ವಿಜಯಪುರ	11	11.00			4	6.37				
8	ಚಾಮರಾಜನಗರ	3	6.00	18	18.21	2	4.00	1	2.00		
9	ಶಿವಮೊಗ್ಗ	1	1.00								
10	ಬೆಳಗಾವಿ	2	4.00	7	11.07					6	7–25
11	ದಾವಣಗೆರೆ	2	3.26	0	0.00						
12	ಹಾವೇರಿ	1	1.20					1	2.00		
13	ತುಮಕೂರು			7	11.08			12	21.38		
14	ಮೈಸೂರು			1	1.00			7	8.00	8	10–21
15	ಉಡುಪಿ			1	1.10						
16	ಗದಗ					17	33.06	4	8.00	5	9–16
17	ಕಲಬುರಗಿ							44	48.26	5	5–00
18	ಯಾದಗಿರಿ					9	12.34	69	71.33	8	8–00
19	ಬೀದರ್							4	8.00		
20	ಮಂಡ್ಯ							1	1.00		
21	ಉತ್ತರ ಕನ್ನಡ							3	2.31		
22	ರಾಮನಗರ									1	1–31
23	ಕೊಪ್ಪಳ									6	12–37
		276	**319.10**	**112**	**113.70**	**196**	**283.30**	**386**	**458.09**	**128**	**142-19**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1429
ಮಾನ್ಯ ಸದಸ್ಯರ ಹೆಸರು	:	ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)
ವಿಷಯ	:	ಪ್ರವಾಸಿ ತಾಣಗಳಅಭಿವೃದ್ಧಿ
ಉತ್ತರಿಸುವ ದಿನಾಂಕ	:	14.12.2018
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಳಗಾವಿ ಜಿಲ್ಲೆ ನಿಪ್ಪಾಣಿ ತಾಲ್ಲೂಕು ರಾಜ್ಯದ ಗಡಿ ಭಾಗದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಗಡಿ ಭಾಗದಲ್ಲಿರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;</td><td rowspan="3">
ಗಡಿ ಭಾಗದಲ್ಲಿರುವ ಪ್ರವಾಸಿ ತಾಣಗಳ ಹಾಗೂ ಧಾರ್ಮಿಕ ತಾಣಗಳ ಪ್ರಾಮುಖ್ಯತೆ, ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಲು ಕ್ರಮ ವಹಿಸಲಾಗುತ್ತಿದೆ.

ನಿಪ್ಪಾಣಿ ತಾಲ್ಲೂಕಿನಲ್ಲಿ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ</th><th>ಬಿಡುಗಡೆ ಮಾಡಿರುವ ಮೊತ್ತ</th></tr>
<tr><td>1</td><td>ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಮತಕ್ಷೇತ್ರದ ಆಡಿ ಗ್ರಾಮದ ಶ್ರೀ ದತ್ತ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ (2014-15)</td><td>49.00</td><td>49.00</td></tr>
<tr><td>2</td><td>ಚಿಕ್ಕೋಡಿ ತಾಲ್ಲೂಕಿನ ಕುಠಾಳಿ ಗ್ರಾಮದ ನಿಪ್ಪಾಣಿ ಚಿಕ್ಕೋಡಿ ರಸ್ತೆಯಿಂದ ಬಸವೇಶ್ವರ ದೇವಸ್ಥಾನದವರೆಗೆ ರಸ್ತೆಅಭಿವೃದ್ಧಿ. (RIDF XXI-TRR 21027)</td><td>50.00</td><td>50.00</td></tr>
</table>
ಮುಂದುವರೆದು, 2017-18ನೇ ಸಾಲಿನಲ್ಲಿ ಈ ಕೆಳಕಂಡ ಪ್ರವಾಸಿ ಮೂಲ ಸೌಲಭ್ಯ ಅಭಿವೃದ್ಧಿ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ಕಾಮಗಾರಿಯ ಹೆಸರು</th><th>ಅಂದಾಜು ಮೊತ್ತ</th><th>ಬಿಡುಗಡೆ ಮಾಡಿರುವ ಮೊತ್ತ</th></tr>
<tr><td>1</td><td>ನಿಪ್ಪಾಣಿ ತಾಲ್ಲೂಕಿನ ರಾಸಾಯಿ ಶೆಂಡೂರು ಗ್ರಾಮದ ಶ್ರೀ ಮಹಾಕಾಳಿ ಮಹಾಸಂಸ್ಥಾನ ಓಂ ಶಕ್ತಿ ದೇವಸ್ಥಾನ ಇಲ್ಲಿ ಯಾತ್ರಿ ನಿವಾಸ ನಿರ್ಮಾಣ (2017-18)</td><td>25.00</td><td>10.00</td></tr>
<tr><td>2</td><td>ನಿಪ್ಪಾಣಿ ತಾಲ್ಲೂಕಿನ ಅಪ್ಪಾಚಿವಾಡಿ ಗ್ರಾಮದ ಶ್ರೀ ಹಾಲಸಿದ್ದೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ. (2017-18)</td><td>25.00</td><td>10.00</td></tr>
<tr><td>3</td><td>ಚಿಕ್ಕೋಡಿ ತಾಲ್ಲೂಕಿನ ಆಡಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ.(2017-18)</td><td>25.00</td><td>10.00</td></tr>
</table>
ಈ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.
</td></tr>
<tr><td>ಇ)</td><td>ಹಾಗಿದ್ದಲ್ಲಿ, ಯಾವಯಾವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗುವುದು;</td></tr>
<tr><td>ಈ)</td><td>ಯಾವ ಕಾಲಮಿತಿಯೊಳಗೆ ಅಭಿವೃದ್ಧಿಪಡಿಸಲಾಗುವುದು?</td></tr>
</table>

ಸಂಖ್ಯೆ: ಪ್ರಇ 108 ಪ್ರವಾವಿ 20180

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

(3)

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ : 1793
ಸದಸ್ಯರ ಹೆಸರು : ಶ್ರೀ. ಕೆ.ಎಂ. ಶಿವಲಿಂಗೇಗೌಡ
ಉತ್ತರಿಸಬೇಕಾದ : 14.12.2018
ಉತ್ತರಿಸುವ ಸಚಿವರು : ಕೃಷಿ ಸಚಿವರು

ಪ್ರಶ್ನೆ	ಉತ್ತರ
ಅ) ಅರಸೀಕೆರೆ ವಿಧಾನಸಭಾ ಕ್ಷೇತ್ರದ ಮಾಡಾಳು, ಲಾಳನಕೆರೆ, ಬಾಗೀವಾಳು, ಮುರಲೇಹಳ್ಳಿ, ಬೆಳಗುಂಬ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ರೈತರುಗಳ ಬೆಳೆ ನಷ್ಟಕ್ಕೆ 2017-18ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿಯಲ್ಲಿ ವಿಮಾ ಪರಿಹಾರ ಹಣ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪರಿಹಾರ ಹಣ ಬಾರದಿರಲು ಕಾರಣಗಳೇನು;	ಬಂದಿದೆ. ಈ ವಿಮಾ ಘಟಕದಲ್ಲಿ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಹೆಚ್ಚಿಗೆ ಇರುವುದರಿಂದ, ಇಳುವರಿ ಆಧಾರಿತ(CCE Compensation) ವಿಮೆ ಪರಿಹಾರ ಮೊತ್ತ ದೊರಕಿರುವುದಿಲ್ಲ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. 2017-18 ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಈ ಬೆಳೆ ವಿಮೆ ಘಟಕಗಳಡಿ ಯಾವುದೇ ಬೆಳೆ ಅಧಿಸೂಚಿಸಲಾಗಿರುವುದಿಲ್ಲ. Yes. As the Actual yield is more than the Threshold yield in these insurance units, no CCE Compensation was given to the farmers. During Rabi 2017-18 no crops have been notified in these insurance units.
ಆ) ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ಪರಿಹಾರ ಹಣ ನೀಡಲು ಇರುವ ನಿಯಮಾವಳಿಗಳಾವುವು?	ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳನ್ನು ಬೆಳೆದ ರೈತರು ವಿಮೆ ಮಾಡಿಸಬಹುದು. ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಪ್ರಸಕ್ತ ಹಂಗಾಮಿಗಾಗಿ ಬೆಳೆ ಸಾಲ ಮಂಜೂರಾದ ಎಲ್ಲಾ ರೈತರನ್ನು ಕಡ್ಡಾಯವಾಗಿ ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುತ್ತದೆ. ಮಂಜೂರಾದ ಬೆಳೆ ಸಾಲದ ಮೊತ್ತದ ಜೊತೆಗೆ ಹೆಚ್ಚುವರಿಯಾಗಿ ರೈತರ ವಿಮಾ ಕಂತನ್ನು ನಿಯಮಾನುಸಾರ ಮಂಜೂರು ಮಾಡಲಾಗುತ್ತದೆ. ಪ್ರಸ್ತುತ ಸಾಲು ಹಾಗೂ ಹಂಗಾಮಿನಲ್ಲಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಚೆಯುಳ್ಳ ಬೆಳೆ ಸಾಲ ಪಡೆಯದ ರೈತರು ಯೋಜನೆಯಡಿ ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ಖಾತೆ ಪುಸ್ತಕ/ಪಾಸ್ ಪುಸ್ತಕ/ಕಂದಾಯ ರಶೀದಿಯನ್ನು ಹಾಗೂ ಆಧಾರ್ ಸಂಖ್ಯೆ ನೀಡತಕ್ಕದ್ದು. ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಜಿಲ್ಲಾವಾರು ಹಾಗೂ ಬೆಳೆವಾರು ಅಧಿಸೂಚಿಸಿದ ಕೊನೆಯ ದಿನಾಂಕದೊಳಗೆ ಬೆಳೆ ವಿಮೆಯಡಿ ನೋಂದಣಿ ಮಾಡಿಕೊಳ್ಳಬಹುದು. ಈ ಯೋಜನೆಯಡಿ ಪರಿಹಾರ ನೀಡಲು ನಿಯಮಗಳು ಕೆಳಕಂಡಂತಿದೆ: ಬೆಳೆ ವಿಮಾ ಯೋಜನೆಯಡಿ ಕೇಂದ್ರ ಸರ್ಕಾರದ ಮಾಗಸೂಚಿಯಂತೆ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಹೋಬಳಿ/ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಂಡುಹಿಡಿಯಲಾದ ವಾಸ್ತವಿಕ ಇಳುವರಿ ಮಾಹಿತಿಯು ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿ ಕೊರತೆಗನುಗುಣವಾಗಿ ಹಾಗೂ ಸದರಿ ವಿಮಾ ಘಟಕದಲ್ಲಿ ವಿಮೆ ಮಾಡಿಸಿದ ವಿಸ್ತೀರ್ಣ ಮತ್ತು ಬಿತ್ತನೆ ವಿಸ್ತೀರ್ಣದ ದತ್ತಾಂಶವನ್ನು ಪರಿಗಣಿಸಿ ವಿಮೆ ವಿಸ್ತೀರ್ಣ ಬಿತ್ತನೆ ವಿಸ್ತೀರ್ಣಕ್ಕಿಂತ ಹೆಚ್ಚಾಗಿದ್ದರೆ, Area Discrepancy factor(Area

	insured/Area sown) ತೆಗೆದುಕೊಂಡು ಹೋಬಳಿ/ಗ್ರಾಮ ಪಂಚಾಯತಿಯಲ್ಲಿ ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುತ್ತದೆ. In KRS-PMFBY, All farmers growing the notified crops in the notified areas are eligible for coverage. The farmers sanctioned with the crop loans for the crops notified in various insurance units are compulsorily enrolled under this scheme. Along with the sanctioned loan amount, the farmers premium amount is also sanctioned as additional loan amount as per the rules. However, farmers should have insurable interest for the notified/insured crops. The non-loanee farmers are required to submit necessary documentary evidence of land records-RTC, land possession certificate, pass book, revenue receipts and Aadhaar number. Both loanee and non-loanee farmers have to enroll within notified cut-off dates specific to crops and districts. In this scheme, the following guidelines are followed to calculate the claims: As per the GoI guidelines, crop estimation survey is conducted by the state Government to find out Actual yield at Hobli/Gram panchayath levels through crop cutting experiment results. Claims will be calculated based on Actual yield in comparison to threshold yield. If Actual yield is lesser than threshold yield, Area Discrepancy factor(Area insured/Area sown) is used to decide the crop insurance claims to the enrolled farmers of that Hobli/Gram panchayath.

ಕೃಇ 110 ಕೃಕ್ಕೈಉ 2018

(ಎನ್. ಎಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು

ಅನುಬಂಧ

2017-18ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿಯಲ್ಲಿ ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಬೆಳೆ ವಿಮೆ ವಿವರಗಳು LAQ-1793

ಮೊತ್ತ- ರೂ.ಲಕ್ಷಗಳಲ್ಲಿ ವಿಸ್ತೀರ್ಣ- ಹೆಕ್ಟೇರುಗಳಲ್ಲಿ

ಗ್ರಾಮ ಪಂ/ಹೋಬಳಿ	ಬೆಳೆ	ನೀ/ಮ.ಆ	ಅರ್ಜಿಗಳ ಸಂಖ್ಯೆ	ಸ್ವೀಕೃತವಾದ ಅರ್ಜಿಗಳ ಸಂಖ್ಯೆ	ವಿಮಾ ಮೊತ್ತ	ವಿಮಾ ಕಂತು	ಬೆಳೆ ವಿಸ್ತೀರ್ಣ	ಬಿತ್ತನೆಯಾದ ವಿಸ್ತೀರ್ಣ	ಪ್ರಾರಂಭಿಕ ಇಳುವರಿ (ಕೆಜಿ/ಹೆ)	ಬೆಳೆ ಕಟಾವು ಪ್ರಯೋಗಗಳ ಸಂಖ್ಯೆ	ವಾಸ್ತವಿಕ ಇಳುವರಿ(ಕೆಜಿ/ಹೆ)	ಇಳುವರಿ ಕೊರತೆ	ರಿಡಕ್ಷನ್ ಫ್ಯಾಕ್ಟರ್
ಬಾಗೀವಾಳು	ಹೆಸರು	ಮ.ಆ	68	68	10.23	0.2	36.5462	120	164.82	4	363.975	-120.832	1
ಬಾಗೀವಾಳು	ರಾಗಿ	ಮ.ಆ	53	29	7.68	0.15	21.3319	716	1048.8	4	3117.175	-197.213	1
ಬೆಳಗುಂಬ	ಹೆಸರು	ಮ.ಆ	564	563	83.51	1.67	298.2336	213	173.96	4	375.413	-115.804	0.7153
ಬೆಳಗುಂಬ	ರಾಗಿ	ಮ.ಆ	131	129	28.1	0.56	78.0642	1103	1163.02	4	2565.488	-120.588	1
ಲಾಳನಕೆರೆ	ಹೆಸರು	ಮ.ಆ	195	189	33.16	0.66	118.4196	186	184.16	4	658.288	-257.454	1
ಲಾಳನಕೆರೆ	ರಾಗಿ	ಮ.ಆ	64	17	16.41	0.33	45.5728	441	1367.12	4	3240.875	-137.059	1
ಮಾಡಾಳು	ಹೆಸರು	ಮ.ಆ	638	635	66.77	1.34	238.46	119	190.85	4	201.998	-5.84124	0.5017
ಮುರಲೇಹಳ್ಳಿ	ಹೆಸರು	ಮ.ಆ	971	934	123.89	2.48	442.4527	252	148.83	4	236.3	-58.7718	0.5913
ಮುರಲೇಹಳ್ಳಿ	ರಾಗಿ	ಮ.ಆ	52	51	10.07	0.2	27.9646	970	1205.03	4	3863.568	-220.62	1

(4)
ಕಛೇರಿ : 22353978
22034048

ಡಾ ಕೆ.ಕೆ. ರವಿಮೂರ್ತಿ
ಸರ್ಕಾರದ ಉಪ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, ಡಾ: ಅಂಬೇಡ್ಕರ್ ವೀಧಿ
ಬೆಂಗಳೂರು – 560 001

ಅ.ಸ. ಪತ್ರ ಸಂಖ್ಯೆ:ಪ್ರಇ 107 ಪ್ರವಾವಿ 2018 ದಿನಾಂಕ:05.12.2018

L.A. Urgent

ಮಾನ್ಯರೆ,

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪ್ರೀತಮ್ ಜೆ ಗೌಡ[ಹಾಸನ] ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1096ರಲ್ಲಿ "ಹಾಸನ ನಗರ ಚನ್ನಪಟ್ಟಣ ಕೆರೆ ಅಭಿವೃದ್ಧಿ" ಬಗ್ಗೆ ಪ್ರಸ್ತಾಪಿಸಿದೆ(ಮೂಲಪ್ರತಿ ಲಗತ್ತಿಸಿದೆ). ಚನ್ನಪಟ್ಟಣ ಕೆರೆ ಅಭಿವೃದ್ಧಿಪಡಿಸುವ ಯೋಜನೆಯನ್ನು ಕರ್ನಾಟಕ ಕಾವೇರಿ ನೀರಾವರಿ ನಿಗಮದಿಂದ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಸದರಿ ವಿಷಯವು ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಈ ಬಗ್ಗೆ ಕೂಡಲೇ ಗಮನಹರಿಸಿ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1096ಕ್ಕೆ ಸಂಬಂಧಿಸಿದ ಉತ್ತರಗಳನ್ನು ನೇರವಾಗಿ ಕರ್ನಾಟಕ ವಿಧಾನ ಸಭಾ ಸಚಿವಾಲಯಕ್ಕೆ ಒದಗಿಸಲು ಅವಶ್ಯ ಕ್ರಮ ಕೈಗೊಳ್ಳುವಂತೆ ಕೋರಿ ಮೂಲ ಪ್ರಶ್ನೆಯನ್ನು ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಲಾಗಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ಕೆ. ಜೈಪ್ರಕಾಶ್
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಪ್ರತಿ:

1. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು ಇವರ ಸಂಖ್ಯೆ: ಪ್ರಶಾವಿಸ/15ನೇವಿಸ/2ಅ/ಪ್ರ.ಸಂ.1096/2018 ದಿ:02/12/2018ರ ಸಂಬಂಧ ಮಾಹಿತಿಗಾಗಿ ಕಳುಹಿಸಿದೆ.
2. ಮಾನ್ಯ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

Received on 12/12/2018
12.45 PM.

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 1438
2. ಸದಸ್ಯರ ಹೆಸರು : ಶ್ರೀ ಹರೀಶ್ ಪುಂಜ
3. ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 14-12-2018

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಳೆ ರೋಗದಿಂದಾದ ನಷ್ಟ ಎಷ್ಟು; ಸರ್ಕಾರ ಕೊಳೆ ರೋಗ ನಿಯಂತ್ರಣಕ್ಕೆ ಯಾವ ಕ್ರಮಗಳನ್ನು ಕೈಗೊಂಡಿದೆ; ಪರಿಹಾರ ಕ್ರಮಗಳ ವಿಳಂಬಕ್ಕೆ ಕಾರಣಗಳೇನು;	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2018-19ನೇ ಸಾಲಿನಲ್ಲಿ ಅತಿವೃಷ್ಠಿಯಿಂದ 33595 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಗೆ ಕೊಳೆ ರೋಗದಿಂದಾದ ನಷ್ಟ ರೂ. 252.00 ಕೋಟಿಗಳೆಂದು ಅಂದಾಜಿಸಲಾಗಿದೆ. ಸರ್ಕಾರ ಕೊಳೆ ರೋಗ ನಿಯಂತ್ರಣಕ್ಕೆ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. • ಕೊಳೆರೋಗದ ನಿಯಂತ್ರಣ ಕುರಿತು ಅಗತ್ಯ ಮಾಹಿತಿಯನ್ನು ತರಬೇತಿಗಳು, ಪ್ರಾತ್ಯಕ್ಷತೆಗಳು, ಪ್ರಚಾರ ಮಾಧ್ಯಮಗಳು ಹಾಗೂ ಕರಪತ್ರಗಳನ್ನು ಹಂಚುವ ಮೂಲಕ ರೈತರಿಗೆ ನೀಡಲಾಗಿರುತ್ತದೆ. • ಕೊಳೆ ರೋಗದ ನಿಯಂತ್ರಣಕ್ಕೆ ಬಳಸುವ ಕಾಪರ್ ಸಲ್ಫೇಟ್ (ಮೈಲುತುತ್ತ) ಮತ್ತು ಇತರೆ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಲು ರೈತರಿಗೆ ಸಹಾಯಧನ ನೀಡಲಾಗುತ್ತಿದೆ. ಕೇಂದ್ರವಲಯ ಯೋಜನೆಯಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಯೋಜನೆಯಡಿ ಶೇಕಡಾ 30ರಂತೆ ಪ್ರತಿ ಹೆಕ್ಟೇರ್ ಗೆ ರೂ. 1200/- ಗಳ ಸಹಾಯಧನವನ್ನು ಗರಿಷ್ಟ 4 ಹೆಕ್ಟೇರ್ ಗಳಿಗೆ ನೀಡಲಾಗುತ್ತಿದೆ. • ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟ ನಿಯಂತ್ರಣ ಯೋಜನೆ ಅಡಿ ಶೇಕಡಾ 75ರಂತೆ ಪ್ರತಿ ಹೆಕ್ಟೇರ್ ಗೆ ರೂ. 7500/- ಗಳ ಸಹಾಯಧನವನ್ನು ಸಾಮಾನ್ಯ ವರ್ಗದ ರೈತರಿಗೆ ಮತ್ತು ಶೇಕಡಾ 90ರಂತೆ ಪ್ರತಿ ಹೆಕ್ಟೇರ್ ಗೆ ರೂ. 9000/- ಗಳ ಸಹಾಯಧನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ರೈತರಿಗೆ 2 ಹೆಕ್ಟೇರ್ ಗಳಿಗೆ ನೀಡಲಾಗುತ್ತಿದೆ.

- ತಾಲ್ಲೂಕಾ ಪಂಚಾಯತ್ ಯೋಜನೆಯಾದ ರೈತರಿಗೆ ಸಹಾಯ ಕಾರ್ಯಕ್ರಮದಡಿ ಶೇಕಡಾ 50ರಂತೆ ಪ್ರತಿ ಹೆಕ್ಟೇರ್ ಗೆ ರೂ. 2000/- ಗಳ ಸಹಾಯಧನವನ್ನು 1 ಹೆಕ್ಟೇರ್ ಗೆ ನೀಡಲಾಗುತ್ತಿದೆ.
- ಅತಿವೃಷ್ಠಿಯಿಂದ ಕೊಳೆರೋಗಕ್ಕೆ ತುತ್ತಾದ ಅಡಿಕೆ ತೋಟಗಳಲ್ಲಿ ಶೇ. 33 ಕ್ಕಿಂತ ಹೆಚ್ಚಿನ ಫಸಲು ಹಾನಿಯಾದ ಸಂದರ್ಭದಲ್ಲಿ ಅಡಿಕೆ ಬೆಳೆಗಾರರಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿ (NDRF) ಪ್ರತಿ ಹೆಕ್ಟೇರಿಗೆ ರೂ.18000/- ರಂತೆ 2 ಹೆಕ್ಟೇರ್ ಗಳವರೆಗೆ ಪರಿಕರ ಸಹಾಯಧನವನ್ನು ಕಂದಾಯ ಇಲಾಖೆ ಮೂಲಕ ನೀಡಲಾಗುತ್ತಿದೆ.
- ಹವಾಮಾನ ವೈಪರೀತ್ಯದಿಂದ ಅಡಿಕೆ ಬೆಳೆಗಾರರಿಗೆ ಆಗುವ ನಷ್ಟವನ್ನು ಭರಿಸಲು ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತದೆ.

  ಅತಿವೃಷ್ಠಿಯಿಂದ ಹಾನಿಯಾದ ಅಡಿಕೆ ಬೆಳೆಯು ಒಳಗೊಂಡಂತೆ ರಾಜ್ಯದಲ್ಲಿ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಪರಿಹಾರ ಒದಗಿಸಲು ದಕ್ಷಿಣ ಕನ್ನಡ ಜಿಲ್ಲೆಗೆ ರೂ. 6047.54 ಲಕ್ಷಗಳು ಒಳಗೊಂಡಂತೆ ರಾಜ್ಯಕ್ಕೆ ಒಟ್ಟು ರೂ.17527.00 ಲಕ್ಷಗಳನ್ನು ಒದಗಿಸುವಂತೆ ಪ್ರಸ್ತಾವನೆಯನ್ನು ಕಂದಾಯ ಇಲಾಖೆಯ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ದಿನಾಂಕ: 30.08.2018 ರಂದು ಸಲ್ಲಿಸಲಾಗಿರುತ್ತದೆ.

ಕೇಂದ್ರ ಸರ್ಕಾರವು ಇತೀಚೆಗಷ್ಟೇ ರೂ.175.27 ಕೋಟಿ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. 'ಪರಿಹಾರ' ತಂತ್ರಾಂಶ ದಲ್ಲಿ ವಿವರಗಳನ್ನು ನಮೂದಿಸಿ ಕಂದಾಯ ಇಲಾಖೆಯ ಮೂಲಕ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

In Dakshina Kannada district during 2018-19 it is estimated that a loss of Rs. 252.00 crore has occured in an area of 33595 hectares due to Koleroga in Arecanut crop.

The Government has taken the following measures for the control of koleroga disease.

- Farmers have been given information

		through trainings, demonstrations, mass media and distribution of brochures regarding control of Koleroga. ➢ For the purchase of copper sulphate and other plant protection chemicals used for control of Koleroga the farmers have been given subsidy. Under the Central Sector scheme namely National Hortiuculture Mission a subsidy of 30% @ Rs. 1200/- per hactare for 2 hactares is provided. ➢ Under the State Sector scheme namely Integrated control of Pest and diseases of horticulture crops a subsidy of 75% @ Rs. 7500/- per hactare for general farmers and 90% @ Rs. 9000/- per hactare for scheduled caste and scheduled tribe farmer is provided for 2 hactares. ➢ Under the Taluka panchayat scheme namely Assistance to farmers a subsidy of 50% @ Rs. 2000/- per hactare for 1 hactare is provided. ➢ Input subsidy @ Rs. 18000/- per hactare upto 2 hactares under National Disaster Response Fund is provided to the Arecanut farmers whenever the crop loss of more than 33% acres in Arecanut gardens due to Koleroga owing to heavy rainfall. ➢ Weather Based Crop Insurance Programme is implemented to protect Arecanut farmers

		from loss due to vagories of weather. A proposal of Rs 17527.00 lakh including Rs.6047.54 lakh for Dakshina Kannada District as well has been submitted to Government of India on 30.08.2018 through Revenue department seeking compensation for all Horticulture crops including Arecanut wherein loss has occurred due to excess rainfall Government of India has released Rs.175.27 crores only recently. The data is being entered into 'Parihara' software and Revenue Department has taken measures to release the funds.
ಆ)	ಬೆಳ್ತಂಗಡಿ ತಾಲ್ಲೂಕಿನಲ್ಲಿ ಇತ್ತೀಚಿನ ಅತಿವೃಷ್ಠಿಯಿಂದಾಗಿ ಎಷ್ಟು ಎಕರೆ ಅಡಿಕೆ ಮತ್ತು ಕಾಳು ಮೆಣಸು ತೋಟಗಳಿಗೆ ಕೊಳೆ ರೋಗ ಬಂದಿದೆ; ಅಡಿಕೆ ಮತ್ತು ಕಾಳು ಮೆಣಸು ಬೆಳೆಗಾರರಿಗೆ ಹಾನಿಯಾದ ಮೌಲ್ಯ ಎಷ್ಟು;	ಬೆಳ್ತಂಗಡಿ ತಾಲ್ಲೂಕಿನಲ್ಲಿ ಇತ್ತೀಚಿನ ಅತಿವೃಷ್ಠಿಯಿಂದಾಗಿ ಅಂದಾಜು 17102.50 ಎಕರೆ (6841 ಹೆಕ್ಟೇರ್) ಪ್ರದೇಶದಲ್ಲಿ ಅಡಿಕೆ ತೋಟಗಳಿಗೆ ಕೊಳೆ ರೋಗ ಬಂದಿದೆ. ಇದರ ಅಂದಾಜು ಮೌಲ್ಯ ರೂ.12.31 ಕೋಟಿಗಳು. ಕಾಳು ಮೆಣಸು ತೋಟಗಳಿಗೆ ಶೇ.33 ಕ್ಕಿಂತ ಹೆಚ್ಚಿನ ಹಾನಿ ಉಂಟಾಗಿರುವುದು ವರದಿಯಾಗಿರುವುದಿಲ್ಲ. In Beltangadi taluk it is estimated that an area of 17102.50 acre (6841 hactare) under Arecanut has been affected due to Koleroga during recent floods. Its estimated value of loss is Rs.12.31 crore. Damage to Pepper gardens to the extent of more than 33% is not reported.
ಇ)	ಕೊಳೆ ರೋಗದ ಬೆಳೆ ನಷ್ಟದಿಂದ ಸಂಕಷ್ಟದಲ್ಲಿರುವ ರೈತಾಪಿ ವರ್ಗಕ್ಕೆ ಸರ್ಕಾರ ನೀಡುವ ಪರಿಹಾರ ಕ್ರಮಗಳೇನು? (ವಿವರ ಒದಗಿಸುವುದು)	ಕೊಳೆ ರೋಗದ ಬೆಳೆ ನಷ್ಟದಿಂದ ಸಂಕಷ್ಟದಲ್ಲಿರುವ ರೈತಾಪಿ ವರ್ಗಕ್ಕೆ ಸರ್ಕಾರ ನೀಡುವ ಪರಿಹಾರ ಕ್ರಮಗಳ ವಿವರವನ್ನು ಮೇಲಿನ ಕ್ರಮ ಸಂಖ್ಯೆ 'ಅ' ರಲ್ಲಿ ಒದಗಿಸಲಾಗಿದೆ.

		The details of measures taken by the Government to provide relief to the farming community who are in distressed due to crop loss owing to Kole roga is furnished in the reply as at 'ಅ' above.

ಸಂ.ತೋಇ 386 ತೋಇವಿ 2018

(ಎಂ.ಸಿ.ಮನಗೂಳಿ)

ತೋಟಗಾರಿಕೆ ಸಚಿವರು

ಎಂ.ಸಿ. ಮನಗೂಳಿ (ಸಿಂದಗಿ)
ತೋಟಗಾರಿಕೆ ಸಚಿವರು

3೭೦

(6)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 239

ಸದಸ್ಯರ ಹೆಸರು : **ಶ್ರೀ.ವಿ.ಸುನೀಲ್ ಕುಮಾರ್ (ಕಾರ್ಕಳ)**

ಉತ್ತರಿಸುವ ದಿನಾಂಕ : 14.12.2018

ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಪಶು ವೈದ್ಯಕೀಯ ಕೇಂದ್ರ ಹಾಗೂ ಪಶು ಚಿಕಿತ್ಸಾಲಯಗಳಲ್ಲಿ ಸೂಕ್ತ ವೈದ್ಯರು ಹಾಗೂ ಇತರ ಸಿಬ್ಬಂದಿಗಳ ಕೊರತೆ ಇರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ;	ವಿವಿಧ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಪಶುವೈದ್ಯರು ಹಾಗು ಇತರೆ ಸಿಬ್ಬಂದಿಗಳ ಕೊರತೆ ಇರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಉಡುಪಿ ಜಿಲ್ಲೆಯಲ್ಲಿ ಎಷ್ಟು ಪಶುವೈದ್ಯರ ಹಾಗೂ ಇತರ ಸಿಬ್ಬಂದಿಗಳ ಕೊರತೆ ಇದೆ; (ವೃಂದವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉಡುಪಿ ಜಿಲ್ಲೆಯ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಮಂಜೂರಾದ, ಖಾಲಿ ಇರುವ ಹಾಗೂ ಭರ್ತಿಯಾದ ಪಶುವೈದ್ಯರ ಹಾಗೂ ಸಿಬ್ಬಂದಿಯವರ ಪಶುವೈದ್ಯಕೀಯ ಸಂಸ್ಥೆವಾರು ಮಾಹಿತಿಯನ್ನು <u>**ಅನುಬಂಧ-1**</u> ರಲ್ಲಿ ನೀಡಲಾಗಿದೆ.
ಇ)	ರಾಜ್ಯದಲ್ಲಿ ಎಷ್ಟು ಪಶುವೈದ್ಯಕೀಯ ಕೇಂದ್ರ ಹಾಗೂ ಪಶು ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ; (ಉಡುಪಿ ಜಿಲ್ಲೆಯ ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ರಾಜ್ಯದಲ್ಲಿ ಒಟ್ಟು 4212 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯಕೀಯ ಸಂಸ್ಥೆಗಳ ತಾಲ್ಲೂಕುವಾರು ಮಾಹಿತಿಯನ್ನು <u>**ಅನುಬಂಧ-2**</u> ರಲ್ಲಿ ನೀಡಲಾಗಿದೆ.
ಈ)	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮಕೈಗೊಳ್ಳಲಾಗಿದೆ.	ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಗಿನಂತೆ ಕ್ರಮವಹಿಸಲಾಗುವುದು. **ಸಹಾಯಕ ನಿರ್ದೇಶಕರು:-** ಪಶುವೈದ್ಯಾಧಿಕಾರಿಗಳ ಹುದ್ದೆಯಿಂದ ಮುಂಬಡ್ತಿ ನೀಡಬೇಕಾಗಿದ್ದು, ಮುಂಬಡ್ತಿಗೆ ನಿಗಧಿಪಡಿಸಿದ ಅವಧಿ ಪೂರೈಸಿದವರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ. **ಪಶುವೈದ್ಯಾಧಿಕಾರಿ:-**ವಿಶೇಷ ನೇಮಕಾತಿ ನಿಯಮ 2017ರಡಿಯಲ್ಲಿ ಒಟ್ಟು 476 ಹುದ್ದೆಗಳನ್ನು ಭರ್ತಿಮಾಡಲಾಗಿದ್ದು, ಇದರಲ್ಲಿ ಉಡುಪಿ ಜಿಲ್ಲೆಗೆ 5 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಪ್ರಸ್ತುತ ಖಾಲಿ ಇರುವ 466 ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ

		ಮಾಡಲು ಕ್ರಮವಹಿಸಲಾಗಿದೆ. **ಅರೆ ತಾಂತ್ರಿಕ ಸಿಬ್ಬಂದಿ:** ಅರೆ ತಾಂತ್ರಿಕ ಸಿಬ್ಬಂದಿಗಳಾದ ಜಾನುವಾರು ಅಭಿವೃದ್ಧಿ ಅಧಿಕಾರಿಗಳು 171 ಹುದ್ದೆ, ಜಾನುವಾರು ಅಧಿಕಾರಿಗಳು 212 ಹುದ್ದೆ, ಹಿ ಋ ಪಶುವೈದ್ಯಕೀಯ ಪರೀಕ್ಷಕರು 530 ಹುದ್ದೆ, ಪಶುವೈದ್ಯಕೀಯ ಪರೀಕ್ಷಕರ 514 ಹುದ್ದೆ, ಪಶುವೈದ್ಯಕೀಯ ಸಹಾಯಕರ 106 ಹುದ್ದೆಗಳಿಗೆ ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದೆ. **ಲಿಪಿಕ ವೃಂದ:** ಲಿಪಿಕ ನೌಕರರಾದ ಸಹಾಯಕ ಆಡಳಿತ ಅಧಿಕಾರಿಗಳ 05 ಹುದ್ದೆ, ಅಧೀಕ್ಷಕರ 23 ಹುದ್ದೆ, ಪ್ರಥಮ ದರ್ಜೆ ಸಹಾಯಕರು 31 ಹುದ್ದೆ, ದ್ವಿತೀಯ ದರ್ಜೆ ಸಹಾಯಕರು 04 ಹುದ್ದೆ, ಶೀಘ್ರಲಿಪಿಗಾರರು 14 ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದೆ. **ವಾಹನ ಚಾಲಕರು:** ವಾಹನ ಚಾಲಕರು 30 ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದೆ. **ಡಿ-ದರ್ಜೆ ನೌಕರರು:-** ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ "ಡಿ"ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮ ರಚಿಸಲು ಕ್ರಮವಹಿಸಲಾಗಿದೆ ಹಾಗೂ ಪ್ರಸ್ತುತ 1500 ಹುದ್ದೆಗಳಿಗೆ ಹೊರಗುತ್ತಿಗೆ ಸೇವೆ ಪಡೆಯಲಾಗಿದ್ದು, 756 ಹೆಚ್ಚುವರಿಯಾಗಿ ಹೊರಗುತ್ತಿಗೆ ಮೇರೆಗೆ ನೇಮಕ ಮಾಡಲು ಕ್ರಮವಹಿಸಲಾಗಿದೆ.

ಸಂ: ಪಸಂಮೀ 145 ಪಸಸೇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಅನುಬಂಧ-1

ಶ್ರೀ ವಿ.ಸುನೀಲ್‌ಕುಮಾರ್, ವಿಧಾನ ಸಭೆಯ ಸದಸ್ಯರು (ಕಾರ್ಕಳ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂ.239 ಕ್ಕೆ ಸಂಬಂಧಿಸಿದಂತೆ ಅನುಬಂಧ 1

ದಿನಾಂಕ 05.12.2018 ರಲ್ಲಿದ್ದಂತೆ ತಾಲ್ಲೂಕುವಾರು, ಸಂಸ್ಥೆವಾರು, ಹುದ್ದೆವಾರು ವಿವರ

ಕ್ರ. ಸಂ	ಸಂಸ್ಥೆಯ ಹೆಸರು	ಉಪ ನಿರ್ದೇಶಕರು			ಸಹಾಯಕ ನಿರ್ದೇಶಕರು			ಪಶು ವೈದ್ಯಾಧಿಕಾರಿಗಳು			ಜಾನುವಾರು ಅಭಿವೃದ್ಧಿ ಅಧಿಕಾರಿ			ಜಾನುವಾರು ಅಧಿಕಾರಿ			ಹಿರಿಯ ಪಶು ಪರೀಕ್ಷಕರು			ಪಶು ಪರೀಕ್ಷಕರು			ಪ.ವೈ. ಸಹಾಯಕರು			ಆಡಳಿತ ಸಹಾಯಕರು			ಕಛೇರಿ ಅಧೀಕ್ಷಕರು			ಪ್ರ.ದ.ಸ			ದ್ವಿ.ದ.ಸ			ಪ್ರಯೋಗ ಶಾಲಾ ಸಹಾಯಕರು			ಬೆರಳಚ್ಚುಗಾರರು			ವಾಹನ ಚಾಲಕರು			ಡಿ ದರ್ಜೆ			ಒಟ್ಟು		
		ಮಂ	ಭ	ಖಾ	ಮಂ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ
	ಉಡುಪಿ ತಾಲೂಕು																																																			
1	ಉ.ನಿ. ಕಛೇರಿ (ಆಡಳಿತ)	1	1		1	0	1	0	0	0	1	1	0	0	0	0	0	0	0	0	0	0	0	0	0	1	0	1	1	1	0	2	1	2	2	2	0	0	0	0	1	1	0	1	0	1	4	0	4	15	7	9
2	ಉ.ನಿ. ಕಛೇರಿ, ಪಾಲಿ ಕ್ಲಿನಿಕ್	1	1	0	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	1	0	0	0	0	0	1	0	1	0	0	0	1	0	0	2	0	2	7	3	3
3	ಪ.ಆ. ಉಡುಪಿ	0	0	0	1	1	0	1	0	1	1	1	0	0	0	0	0	0	0	0	0	0	3	2	1	0	0	0	0	0	0	0	0	0	1	1	0	0	0	0	0	0	0	1	0	1	2	0	2	10	5	5
4	ಪ.ಆ. ಕಾಪು	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
5	ಪ.ಆ. ಕೋಟ	0	0	0	1	1	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	1	1	4	3	1
6	ಪ.ಆ. ಬ್ರಹ್ಮಾವರ	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	1	1	4	2	2
7	ಪ.ಚಿ. ಸಾಸ್ತಾನ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
8	ಪ.ಚಿ. ಮಲ್ಪೆ	0	0	0	0	0	0	1	0	1	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
9	ಪ.ಚಿ. ಮಣಿಪಾಲ	0	0	0	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
10	ಪ.ಚಿ. ಸ್ವಾಬರಕಟ್ಟೆ	0	0	0	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	2	2
11	ಪ.ಚಿ. ಹಿರಿಯಡ್ಕ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	1	1	4	2	2
12	ಪ.ಚಿ. ಕಟಪಾಡಿ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
13	ಪ.ಚಿ. ಬೈರಂಪಳ್ಳಿ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
14	ಪ.ಚಿ. ಕಲ್ಯಾಣಪುರ	0	0	0	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	2	2
15	ಪ.ಚಿ. ಶಿರ್ವ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
16	ಪ.ಚಿ ಪಡುಬೆಳ್ಳೆ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
17	ಪ.ಚಿ. ಕಡೇಕಾರು	0	0	0	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
18	ಪ.ಚಿ. ಪಡುಬಿದ್ರಿ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
19	ಪ.ಚಿ. ಉದ್ಯಾವರ	0	0	0	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
20	ಪ.ಚಿ. ಕ.ಸಂತೇಕಟ್ಟೆ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
21	ಪ.ಚಿ. ಗುಂಡ್ಮಿ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
22	ಪ.ಚಿ. ಆವರ್ಸೆ	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
23	ಪ.ಚಿ. ಶಿರಿಯಾರ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
24	ಪ.ಚಿ. ಪಡೂರು	0	0	0	0	0	0	1	1	0	0	0	0	0	0	0	1	0	1	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	1	0	1	4	2	2
25	ಪ್ರಾ.ಪ.ಚಿ. ಮಣಿಪುರ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
26	ಪ್ರಾ.ಪ.ಚಿ. ಹಿಲಿಯಾಣ	0	0	0	0	0	0	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	1	0	1	3	2	1
27	ಪ್ರಾ.ಪ.ಚಿ. ಹೆಗ್ಗುಂಜೆ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
28	ಪ್ರಾ.ಪ.ಚಿ. ಕುಕ್ಕೆಹಳ್ಳಿ	0	0	0	0	0	0	0	0	0	0	0	0	0	0	0	1	1	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	1	0	1	3	2	1
29	ಪ್ರಾ.ಪ.ಚಿ. ಕೊಕ್ಕರ್ಣೆ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
30	ಪ್ರಾ.ಪ.ಚಿ. ಧರ್ಮಸಾಲೆ	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
31	ಪ್ರಾ.ಪ.ಚಿ. ಪೇತ್ರಿ	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
32	ಪ್ರಾ.ಪ.ಚಿ. ಅದಮಾರು	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
33	ಪ್ರಾ.ಪ.ಚಿ. ಪಲಿಮಾರು	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
34	ಪ್ರಾ.ಪ.ಚಿ. ಮುದರಂಗಡಿ	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
35	ಪ್ರಾ.ಪ.ಚಿ. 80-ಬ.ಬೆಟ್ಟು	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
36	ಪ್ರಾ.ಪ.ಚಿ. ಕೊಳಲಗಿರಿ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
37	ಪ್ರಾ.ಪ.ಚಿ. ಮರ್ಣೆ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
	ಒಟ್ಟು-	2	2	0	5	4	1	20	14	6	2	2	0	3	1	2	18	9	9	14	5	9	17	5	12	1	0	1	1	1	0	3	1	2	3	3	0	0	0	0	1	1	0	3	0	2	62	3	59	155	51	104

ಕ್ರ. ಸಂ	ಸಂಸ್ಥೆಯ ಹೆಸರು	ಉಪ ನಿರ್ದೇಶಕರು			ಸಹಾಯಕ ನಿರ್ದೇಶಕರು			ಪಶು ವೈದ್ಯಾಧಿಕಾರಿಗಳು			ಜಾನುವಾರು ಅಭಿವೃದ್ಧಿ ಅಧಿಕಾರಿ			ಜಾನುವಾರು ಅಧಿಕಾರಿ			ಹಿರಿಯ ಪಶು ಪರೀಕ್ಷಕರು			ಪಶು ಪರೀಕ್ಷಕರು			ಪ.ವೈ. ಸಹಾಯಕರು			ಆಡಳಿತ ಸಹಾಯಕರು			ಕಚೇರಿ ಅಧೀಕ್ಷಕರು			ಪ್ರ.ದ.ಸ			ದ್ವಿ.ದ.ಸ			ಪ್ರಯೋಗ ಶಾಲಾ ಸಹಾಯಕರು			ಬೆರಳಚ್ಚುಗಾರರು			ವಾಹನ ಚಾಲಕರು			ಡಿ ದರ್ಜೆ			ಒಟ್ಟು		
		ಮಂ	ಭ	ಖಾ	ಮಂ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ
	ಕುಂದಾಪುರ ತಾಲ್ಲೂಕು																																																			
38	ಪ.ಆ. ಕುಂದಾಪುರ	0	0	0	1	1	0	2	2	0	1	1	0	0	0	0	1	0	1	0	0	0	3	0	3	0	0	0	0	0	0	0	0	0	1	0	1	0	0	0	0	0	0	1	0	1	2	0	2	12	4	8
39	ಪ.ಆ. ವಂಡ್ಸೆ	0	0	0	0	0	0	1	1	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	5	2	3
40	ಪ.ಆ. ಶಂ.ನಾರಾಯಣ	0	0	0	1	1	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	2	2
41	ಕು.ವಿ.ಕೇ. ಕುಂದಾಪುರ	0	0	0	0	0	0	0	0	0	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	3	1	2
42	ಪ.ಚಿ. ಬೈಂದೂರು	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	1	1	4	2	2
43	ಪ.ಚಿ. ಶಿರಿಮಂಜೇಶ್ವರ	0	0	0	0	0	0	1	1	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	2	0	2	5	2	3
44	ಪ.ಚಿ ಗುಜ್ಜಾಡಿ	0	0	0	0			1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
45	ಪ.ಚಿ. ಕೊಲ್ಲೂರು	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
46	ಪ.ಚಿ. [illegible]ಲ್‌ಕಟ್ಟೆ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
47	ಪ.ಚಿ. ಅಮಾಸೆಬೈಲು	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
48	ಪ.ಚಿ. ಬೆಳ್ವೆ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
49	ಪ.ಚಿ. ಕೆದೂರು	0	0	0	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	2	2
50	ಪ.ಚಿ. ಹುಣ್ಸೆಮಕ್ಕಿ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
51	ಪ.ಚಿ. ಹೆಮ್ಮಾಡಿ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
52	ಪ.ಚಿ. ಜಡ್ಕಲ್	0	0	0	0	0	0	1	0	1	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
53	ಪ.ಚಿ. ಹಳ್ಳಿಹೊಳೆ	0	0	0	0	0	0	1	0	1	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
54	ಪ.ಚಿ. ನಾಡ	0	0	0	0	0	0	1	0	1	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	1	0	4	2	2
55	ಪ್ರಾ.ಪ.ಚಿ. ಬಸ್ರೂರು	0	0	0	0	0	0	0	0	0	0	0	0	0	0	0	1	0	1	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
56	ಪ್ರಾ.ಪ.ಚಿ. ಅಂಪಾರು	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
57	ಪ್ರಾ.ಪ.ಚಿ. ಗಂಗೊಳ್ಳಿ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
58	ಪ್ರಾ.ಪ.ಚಿ. ಕುಂಭಾಶಿ	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	1	0	3	1	2
59	ಪ್ರಾ.ಪ.ಚಿ. ಕಾಲ್ತೋಡು	0	0	0	0	0	0	0	0	0	0	0	0	0	0	0	1	0	1	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
60	ಪ್ರಾ.ಪ.ಚಿ. ಕಂಡ್ಲೂರು	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
61	ಪ್ರಾ.ಪ.ಚಿ. ಸಿದ್ದಾಪುರ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
62	ಪ್ರಾ.ಪ.ಚಿ. ಕಾಳಾವರ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
63	ಪ್ರಾ.ಪ.ಚಿ. ಕೊರ್ಗಿ	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
64	ಪ್ರಾ.ಪ.ಚಿ. ಆಜ್ರಿ	0	0	0	0	0	0	0	0	0	0	0	0	0	0	0	1	1	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
65	ಪ್ರಾ.ಪ.ಚಿ. ಮುಂಡಿಮೂರು	0	0	0	0	0	0	0	0	0	0	0	0	0	0	0	1	0	1	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
	ಒಟ್ಟು-	0	0	0	3	3	0	15	11	4	1	1	0	3	2	1	14	8	6	12	3	9	16	2	14	0	0	0	0	0	0	0	0	0	1	0	1	0	0	0	0	0	0	1	0	1	44	3	41	110	33	77
	ಕಾರ್ಕಳ ತಾಲೂಕು																																																			
66	ಪ.ಆ. ಕಾರ್ಕಳ	0	0	0	1	1	0	2	0	2	1	1	0	0	0	0	1	1	0	0	0	0	3	0	3	0	0	0	0	0	0	0	0	0	1	0	1	0	0	0	0	0	0	1	0	1	2	0	2	12	3	9
67	ಪ.ಆ. ಹೆಬ್ರಿ	0	0	0	1	1	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
68	ಪ.ಆ. ಬಜಗೋಳಿ	0	0	0	1	1	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	2	2
69	ಪ.ಆ. ಅಜೆಕಾರ್	0	0	0	1	0	1	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
70	ಪ.ಚಿ. ನಿಟ್ಟೆ	0	0	0	0	0	0	1	1	0	0	0	0	0	0	0	0	0	0	1	1	0	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	2	2
71	ಪ.ಚಿ. ಕಲ್ಯಾ	0	0	0	0	0	0	1	1	0	0	0	0	0	0	0	0	0	0	1	0	1	0	0	0	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3

ಕ್ರ. ಸಂ	ಸಂಸ್ಥೆಯ ಹೆಸರು	ಉಪ ನಿರ್ದೇಶಕರು			ಸಹಾಯಕ ನಿರ್ದೇಶಕರು			ಪಶು ವೈದ್ಯಾಧಿಕಾರಿಗಳು			ಜಾನುವಾರು ಅಭಿವೃದ್ಧಿ ಅಧಿಕಾರಿ			ಜಾನುವಾರು ಅಧಿಕಾರಿ			ಹಿರಿಯ ಪಶು ಪರೀಕ್ಷಕರು			ಪಶು ಪರೀಕ್ಷಕರು			ಪ.ವೈ. ಸಹಾಯಕರು		
		ಮಂ	ಭ	ಖಾ	ಮಂ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ
72	ಪ.ಚಿ. ವೈಲ್ಲೂರು	0	0	0	0	0	0	1	1	0	0	0	0	0	0	0	0	0	0	1	1	0	0	0	0
73	ಪ.ಚಿ. ಪಳ್ಳಿ	0	0	0	0	0	0	1	1	0	0	0	0	0	0	0	0	0	0	1	0	1	0	0	0
74	ಪ.ಚಿ. ಮುನಿಯಾಲು	0	0	0	0	0	0	1	0	1	0	0	0	0	0	0	0	0	0	1	0	1	0	0	0
75	ಪ.ಚಿ. ಹೀರ್ಗಾನ	0	0	0	0	0	0	1	0	1	0	0	0	0	0	0	0	0	0	1	1	0	0	0	0
76	ಪ.ಚಿ. ಶಿವಪುರ	0	0	0	0	0	0	1	0	1	0	0	0	0	0	0	0	0	0	1	0	1	0	0	0
77	ಗ.ಚಿ. ಬೆಳ್ಮಣ್	0	0	0	0	0	0	1	0	1	0	0	0	0	0	0	1	1	0	0	0	0	1	0	1
78	ಪ್ರಾ.ಪ.ಚಿ. ಮುಂಡ್ಕೂರು	0	0	0	0	0	0	0	0	0	0	0	0	0	0	0	1	1	0	0	0	0	1	0	1
79	ಪ್ರಾ.ಪ.ಚಿ. ಮುದ್ರಾಡಿ	0	0	0	0	0	0	0	0	0	0	0	0	0	0	0	1	1	0	0	0	0	1	0	1
80	ಪ್ರಾ.ಪ.ಚಿ. ಬೋಳ	0	0	0	0	0	0	0	0	0	0	0	0	0	0	0	1	0	1	0	0	0	1	0	1
81	ಪ್ರಾ.ಪ.ಚಿ. ಹೊಸ್ಮಾರು	0	0	0	0	0	0	0	0	0	0	0	0	0	0	0	1	0	1	0	0	0	1	0	1
82	ಪ್ರಾ.ಪ.ಚಿ. ಶಿರ್ಲಾಲು	0	0	0	0	0	0	0	0	0	0	0	0	0	0	0	1	0	1	0	0	0	1	0	1
83	ಪ್ರಾ.ಪ.ಚಿ. ಮಾಳ	0	0	0	0	0	0	0	0	0	0	0	0	0	0	0	1	0	1	0	0	0	1	0	1
84	ಪ್ರಾ.ಪ.ಚಿ. ಕಬ್ಬಿನಾಲೆ	0	0	0	0	0	0	0	0	0	0	0	0	0	0	0	1	0	1	0	0	0	1	0	1
85	ಪ್ರಾ.ಪ.ಚಿ. ನಾಡ್ಪಾಲು	0	0	0	0	0	0	0	0	0	0	0	0	0	0	0	1	1	0	0	0	0	1	0	1
86	ಪ್ರಾ.ಪ.ಚಿ. ಕುಚ್ಚೂರು	0	0	0	0	0	0	0	0	0	0	0	0	0	0	0	1	1	0	0	0	0	1	0	1
87	ಪ್ರಾ.ಪ.ಚಿ. ಸಾಣೂರು	0	0	0	0	0	0	0	0	0	0	0	0	0	0	0	1	0	1	0	0	0	1	0	1
88	ಪ್ರಾ.ಪ.ಚಿ. ಇರ್ವತ್ತೂರು	0	0	0	0	0	0	0	0	0	0	0	0	0	0	0	1	0	1	0	0	0	1	0	1
89	ಪ್ರಾ.ಪ.ಚಿ. ನಕ್ರೆ	0	0	0	0	0	0	0	0	0	0	0	0	0	0	0	1	0	1	0	0	0	1	0	1
	ಕಾರ್ಕಳ ತಾ. ಒಟ್ಟು	0	0	0	4	3	1	19	4	6	1	1	0	3	1	2	14	6	8	7	3	4	16	0	16
	ಜಿಲ್ಲೆಯ ಒಟ್ಟು	2	2	0	12	10	2	45	29	16	4	4	0	9	4	5	46	23	23	33	11	22	49	7	42

ಕ್ರ. ಸಂ	ಸಂಸ್ಥೆಯ ಹೆಸರು	ಆಡಳಿತ ಸಹಾಯಕರು			ಕಚೇರಿ ಅಧೀಕ್ಷಕರು			ಪ್ರ.ದ.ಸ			ದ್ವಿ.ದ.ಸ			ಪ್ರಯೋಗ ಶಾಲಾ ಸಹಾಯಕರು			ಬೆರಳಚ್ಚುಗಾರರು			ವಾಹನ ಚಾಲಕರು			ಡಿ ದರ್ಜೆ			ಒಟ್ಟು		
		ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ	ಮ	ಭ	ಖಾ
72	ಪ.ಚಿ. ವೈಲ್ಲೂರು	0	0	0	0	0	0	0	0	0	0	0	0	0	0	0	0	0	0	0	0	0	2	1	1	4	3	1
73	ಪ.ಚಿ. ಪಳ್ಳಿ	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
74	ಪ.ಚಿ. ಮುನಿಯಾಲು	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
75	ಪ.ಚಿ. ಹೀರ್ಗಾನ	0	0	0	0	0	0	0	0	0	0	0	0	0	0	0	0	0	0	0	0	0	2	0	2	4	1	3
76	ಪ.ಚಿ. ಶಿವಪುರ	0	0	0	0	0	0	0	0	0	0	0	0	0	0	0	0	0	0	0	0	0	2	0	2	4	0	4
77	ಗ.ಚಿ. ಬೆಳ್ಮಣ್	0	0	0	0	0	0	0	0	0	0	0	0	0	0	0	0	0	0	0	0	0	1	0	1	4	1	3
78	ಪ್ರಾ.ಪ.ಚಿ. ಮುಂಡ್ಕೂರು	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
79	ಪ್ರಾ.ಪ.ಚಿ. ಮುದ್ರಾಡಿ	0	0	0	0	0	0	0	0	0	0	0	0	0	0	0	0	0	0	0	0	0	1	1	0	3	2	1
80	ಪ್ರಾ.ಪ.ಚಿ. ಬೋಳ	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
81	ಪ್ರಾ.ಪ.ಚಿ. ಹೊಸ್ಮಾರು	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
82	ಪ್ರಾ.ಪ.ಚಿ. ಶಿರ್ಲಾಲು	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
83	ಪ್ರಾ.ಪ.ಚಿ. ಮಾಳ	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
84	ಪ್ರಾ.ಪ.ಚಿ. ಕಬ್ಬಿನಾಲೆ	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
85	ಪ್ರಾ.ಪ.ಚಿ. ನಾಡ್ಪಾಲು	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
86	ಪ್ರಾ.ಪ.ಚಿ. ಕುಚ್ಚೂರು	0	0	0	0	0	0	0	0	0	0	0	0	0	0	0	0	0	0	0	0	0	1	0	1	3	1	2
87	ಪ್ರಾ.ಪ.ಚಿ. ಸಾಣೂರು	0	0	0	0	0	0	0	0	0	0	0	0	0	0	0	0	0	0	0	0	0	1	1	0	3	1	2
88	ಪ್ರಾ.ಪ.ಚಿ. ಇರ್ವತ್ತೂರು	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
89	ಪ್ರಾ.ಪ.ಚಿ. ನಕ್ರೆ	0	0	0	0	0	0	0	0	0	0	0	0	0	0	0	0	0	0	0	0	0	1	0	1	3	0	3
	ಕಾರ್ಕಳ ತಾ. ಒಟ್ಟು	0	0	0	0	0	0	0	0	0	1	0	1	0	0	0	0	0	0	1	0	1	35	3	32	92	21	71
	ಜಿಲ್ಲೆಯ ಒಟ್ಟು	1	0	1	1	1	0	3	1	2	5	3	2	1	0	1	1	1	0	5	0	5	141	9	132	358	105	253

ಅನುಬಂಧ-2

ಉಡುಪಿ ತಾಲೂಕು		ಕುಂದಾಪುರ ತಾಲೂಕು		ಕಾರ್ಕಳ ತಾಲೂಕು	
1	ಪಾಲಿಕ್ಲಿನಿಕ್ ಉಡುಪಿ				
ಪಶುಆಸ್ಪತ್ರೆಗಳು			ಪಶುಆಸ್ಪತ್ರೆಗಳು		ಪಶುಆಸ್ಪತ್ರೆಗಳು
1	ಪಶು ಆಸ್ಪತ್ರೆ ಬ್ರಹ್ಮಾವರ	1	ಪಶು ಆಸ್ಪತ್ರೆ ಕುಂದಾಪುರ	1	ಪಶು ಆಸ್ಪತ್ರೆ ಕಾರ್ಕಳ
2	ಪಶು ಆಸ್ಪತ್ರೆ ಕೋಟ	2	ಪಶು ಆಸ್ಪತ್ರೆ ಶಂಕರನಾರಾಯಣ	2	ಪಶುವ್ಯದ್ಯಕೀಯ ಆಸ್ಪತ್ರೆ ಹೆಬ್ರಿ
3	ಪಶು ಆಸ್ಪತ್ರೆ, ಕಾಪು	3	ಪಶು ಆಸ್ಪತ್ರೆ ಬೈಂದೂರು	3	ಪಶುವ್ಯದ್ಯಕೀಯ ಆಸ್ಪತ್ರೆ ಬಜಗೋಳಿ
		4	ಪಶುಆಸ್ಪತ್ರೆ, ವಂಡ್ಸೆ	4	ಪಶುವ್ಯದ್ಯಕೀಯ ಆಸ್ಪತ್ರೆ ಅಜೆಕಾರು
ಪಶುಚಿಕಿತ್ಸಾಲಯಗಳು		ಪಶುಚಿಕಿತ್ಸಾಲಯಗಳು		ಪಶುಚಿಕಿತ್ಸಾಲಯಗಳು	
1	ಪಶುಚಿಕಿತ್ಸಾಲಯ, ಕಡೆಕಾರು	1	ಪಶುಚಿಕಿತ್ಸಾಲಯ, ಕೊಲ್ಲೂರು	1	ಪಶುಚಿಕಿತ್ಸಾಲಯ, ನಿಟ್ಟೆ.
2	ಪಶುಚಿಕಿತ್ಸಾಲಯ ಮಣಿಪಾಲ	2	ಪಶುಚಿಕಿತ್ಸಾಲಯ, ಕರಿಮಂಜೇಶ್ವರ	2	ಪಶುಚಿಕಿತ್ಸಾಲಯ, ಮುನಿಯಾಲು.
3	ಪಶುಚಿಕಿತ್ಸಾಲಯ, ಮಲ್ಪೆ	3	ಪಶುಚಿಕಿತ್ಸಾಲಯ, ಗುಜ್ಜಾಡಿ	3	ಪಶುಚಿಕಿತ್ಸಾಲಯ, ಪಳ್ಳಿ
4	ಪಶುಚಿಕಿತ್ಸಾಲಯ, ಉದ್ಯಾವರ,	4	ಪಶುಚಿಕಿತ್ಸಾಲಯ, ಜಡ್ಕಲ್	4	ಪಶುಚಿಕಿತ್ಸಾಲಯ, ಕಲ್ಯಾ
5	ಪಶುಚಿಕಿತ್ಸಾಲಯ, ಪಡುಬಿದ್ರಿ	5	ಪಶುಚಿಕಿತ್ಸಾಲಯ, ಅಮಾಸೆಬೈಲು	5	ಪಶುಚಿಕಿತ್ಸಾಲಯ, ಬೈಲೂರು
6	ಪಶುಚಿಕಿತ್ಸಾಲಯ, ಹಿರಿಯಡ್ಕ	6	ಪಶುಚಿಕಿತ್ಸಾಲಯ, ಹುಣ್ಸೆಮಕ್ಕಿ	6	ಪಶುಚಿಕಿತ್ಸಾಲಯ, ಶಿವಪುರ
7	ಪಶುಚಿಕಿತ್ಸಾಲಯ, ಶಿರ್ವ	7	ಪಶುಚಿಕಿತ್ಸಾಲಯ, ಬೆಳ್ವೆ	7	ಪಶುಚಿಕಿತ್ಸಾಲಯ, ಹಿರ್ಗಾನ
8	ಪಶುಚಿಕಿತ್ಸಾಲಯ, ಕೋಟೆ-ಕಟಪಾಡಿ	8	ಪಶುಚಿಕಿತ್ಸಾಲಯ, ಹೆಮ್ಮಾಡಿ	8	ಪಶುಚಿಕಿತ್ಸಾಲಯ, ಬೆಳ್ಮಣ್
9	ಪಶುಚಿಕಿತ್ಸಾಲಯ, ಪಡುಬೆಳ್ಳೆ	9	ಪಶುಚಿಕಿತ್ಸಾಲಯ, ಕೆದೂರು		
10	ಪಶುಚಿಕಿತ್ಸಾಲಯ, ಕಲ್ಯಾಣಪುರ	10	ಪಶುಚಿಕಿತ್ಸಾಲಯ, ಬಿದ್ಕಲ್‌ಕಟ್ಟೆ		
11	ಪಶುಚಿಕಿತ್ಸಾಲಯ, ಪೆರ್ಡೂರು	11	ಪಶುಚಿಕಿತ್ಸಾಲಯ, ಹಳ್ಳಿಹೊಳೆ		
12	ಪಶುಚಿಕಿತ್ಸಾಲಯ, ಸ್ಯಾಬರಕಟ್ಟೆ	12	ಪಶುಚಿಕಿತ್ಸಾಲಯ, ನಾಡ		
13	ಪಶುಚಿಕಿತ್ಸಾಲಯ, ಸಾಸ್ತಾನ				
14	ಪಶುಚಿಕಿತ್ಸಾಲಯ, ಕಳ್ತೂರು ಸಂತೆಕಟ್ಟೆ				
15	ಪಶುಚಿಕಿತ್ಸಾಲಯ, ಬೈರಂಪಳ್ಳಿ				
16	ಪಶುಚಿಕಿತ್ಸಾಲಯ, ಆವರ್ಸೆ				
17	ಪಶುಚಿಕಿತ್ಸಾಲಯ, ಶಿರಿಯಾರ				
18	ಪಶುಚಿಕಿತ್ಸಾಲಯ, ಗುಂಡ್ಮಿ				
ಪ್ರಾ.ಥಮಿಕ ಪಶುಚಿಕಿತ್ಸಾ ಕೇಂದ್ರ,ಗಳು		ಪ್ರಾ.ಥಮಿಕ ಪಶುಚಿಕಿತ್ಸಾ ಕೇಂದ್ರ,ಗಳು		ಪ್ರಾ.ಥಮಿಕ ಪಶುಚಿಕಿತ್ಸಾ ಕೇಂದ್ರಗಳು	
1	ಪ್ರಾ.ಥಮಿಕ ಪಶುಚಿಕಿತ್ಸಾ ಕೇಂದ್ರ,	1	ಪ್ರಾ.ಥಮಿಕ ಪಶುಚಿಕಿತ್ಸಾ ಕೇಂದ್ರ, ಗಂಗೊಳ್ಳಿ	1	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಕುಚ್ಚೂರು
2	ಪ್ರಾ.ಪ.ಚಿ.ಕೇಂದ್ರ, ಮಣಿಪುರ	2	ಪ್ರಾ.ಪ.ಚಿ.ಕೇಂದ್ರ, ಬಸ್ರೂರು	2	ಪ್ರಾಪಚಿ.ಕೇಂದ್ರ, ಶಿರ್ಲಾಲು
3	ಪ್ರಾ.ಪ.ಚಿ.ಕೇಂದ್ರ, ಕುಕ್ಕೇಹಳ್ಳಿ	3	ಪ್ರಾ.ಪಚಿ.ಕೇಂದ್ರ, ಕಾಳಾವರ	3	ಪ್ರಾ..ಪ.ಚಿ.ಕೇಂದ್ರ, ಇರ್ವತ್ತೂರು
4	ಪ್ರಾ.ಪ.ಚಿ.ಕೇಂದ್ರ, ಹಿಲಿಯಾಣ	4	ಪ್ರಾಪಚಿ.ಕೇಂದ್ರ, ಕಂಡ್ಲೂರು	4	ಪ್ರಾ.ಪಚಿ.ಕೇಂದ್ರ, ಮುಂಡ್ಕೂರು
5	ಪ್ರಾಪ.ಚಿ.ಕೇಂದ್ರ, ಪೇತ್ರಿ	5	ಪ್ರಾಪಚಿ.ಕೇಂದ್ರ, ಕಾಲ್ತೋಡು	5	ಪ್ರಾ.ಪಚಿ.ಕೇಂದ್ರ, ಹೊಸ್ಮಾರು
6	ಪ್ರಾಪಚಿ.ಕೇಂದ್ರ, 80-ಬಡಗಬೆಟ್ಟು	6	ಪ್ರಾಪಚಿ.ಕೇಂದ್ರ, ಮಾಂಡಿಮೂರುಕ್ಕೈ	6	ಪ್ರಾ.ಪ.ಚಿ.ಕೇಂದ್ರ, ಕಬ್ಬಿನಾಲೆ
7	ಪ್ರಾ.ಪ.ಚಿ.ಕೇಂದ್ರ, ಧರ್ಮಸಾಲೆ	7	ಪ್ರಾ.ಪ.ಚಿ.ಕೇಂದ್ರ, ಕುಂಭಾಶಿ	7	ಪ್ರಾ.ಪ.ಚಿ.ಕೇಂದ್ರ, ಮಾಳ
8	ಪ್ರಾ.ಪ.ಚಿ.ಕೇಂದ್ರ, ಪಲಿಮಾರು	8	ಪ್ರಾ.ಪ.ಚಿ.ಕೇಂದ್ರ, ಸಿದ್ದಾಪುರ	8	ಪ್ರಾ.ಪ.ಚಿ.ಕೇಂದ್ರ, ಬೋಳ
9	ಪ್ರಾ.ಪ.ಚಿ ಅದಮಾರು	9	ಪ್ರಾ.ಪ.ಚಿ.ಕೇಂದ್ರ, ಅಂಪಾರು	9	ಪ್ರಾ.ಪ.ಚಿ.ಕೇಂದ್ರ, ಸಾಣೂರು
10	ಪ್ರಾ.ಪ.ಚಿ.ಕೇಂದ್ರ, ಕೊಕ್ಕರ್ಣೆ	10	ಪ್ರಾ.ಪ.ಚಿ.ಕೇಂದ್ರ, ಆಜ್ರಿ	10	ಪ್ರಾ.ಪ.ಚಿ.ಕೇಂದ್ರ, ಮುದ್ರಾಡಿ
11	ಪ್ರಾ.ಪ.ಚಿ, ಕೊಳಲಗಿರಿ	11	ಪ್ರಾ.ಪ.ಚಿ.ಕೇಂದ್ರ, ಕೊರ್ಗಿ	11	ಪ್ರಾ.ಪ.ಚಿ.ಕೇಂದ್ರ, ನಕ್ರೆ
12	ಪ್ರಾ.ಪ.ಚಿ, ಮರ್ಣೆ			12	ಪ್ರಾ.ಪ.ಚಿ.ಕೇಂದ್ರ, ನಾಡ್ಪಾಲು
13	ಪ್ರಾ.ಪ.ಚ, ಹೆಗ್ಗುಂಜೆ				
1	ಸಂಚಾರಿ ಪಶುಚಿಕಿತ್ಸಾಲಯ ಉಡುಪಿ	1	ಸಂಚಾರಿ ಪಶುಚಿಕಿತ್ಸಾಲಯ ಕುಂದಾಪುರ	1	ಸಂಚಾರಿ ಪಶುಚಿಕಿತ್ಸಾಲಯ ಕಾರ್ಕಳ

ಸಂಕ್ಷಿಪ್ತ :

ಪಶುವೈದ್ಯಕೀಯ ಸಂಸ್ಥೆಗಳು	ಸಂಖ್ಯೆ
ಪಾಲಿಕ್ಲಿನಿಕ್	1
ಪಶು ಆಸ್ಪತ್ರೆ	11
ಪಶುಚಿಕಿತ್ಸಾಲಯ	38
ಪ್ರಾ.ಥಮಿಕ ಪಶುಚಿಕಿತ್ಸಾ ಕೇಂದ್ರ	36
ಸಂಚಾರಿ ಪಶುಚಿಕಿತ್ಸಾಲಯ	3
ಒಟ್ಟು-	89

7

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1090
ಮಾನ್ಯ ಸದಸ್ಯರ ಹೆಸರು	ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ(ಸವದತ್ತಿ ಯಲ್ಲಮ್ಮ)
ಉತ್ತರಿಸಬೇಕಾದ ದಿನಾಂಕ	14.12.2018
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ	Reply
ಅ	ಸವದತ್ತಿ ಮತಕ್ಷೇತ್ರದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೊರಾರ್ಜಿ ವಸತಿ ಶಾಲೆ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು	yes
ಆ	ಹಾಗಿದ್ದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೊರಾರ್ಜಿ ವಸತಿ ಶಾಲೆ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮ ಏನು(ವಿವರ ಒದಗಿಸುವುದು)	ರಾಜ್ಯ ಸರ್ಕಾರದಲ್ಲಿ 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಒಟ್ಟು 155 ಹಿಂದುಳಿದ ವರ್ಗಗಳ ಹೊಸ ವಸತಿ ಶಾಲೆಗಳನ್ನು ಹಂತಹಂತವಾಗಿ ಮಂಜೂರು ಮಾಡುವ ಬಗ್ಗೆ ಘೋಷಿಸಿದೆ. 2016-17ನೇ ಸಾಲಿನಲ್ಲಿ 08 ಹಿಂದುಳಿದ ವರ್ಗಗಳ ಹೊಸ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದ್ದು, ಪ್ರಾರಂಭಿಸಲಾಗಿದೆ. ಬಾಕಿ ಉಳಿದ 147 ಹೊಸ ವಸತಿ ಶಾಲೆಗಳ ಮಂಜೂರಾತಿಗೆ ಕರ್ನಾಟಕ ವಸತಿ ಶಿಕ್ಷಣ	Government in the Budget of 2016-17 has announced to sanction 155 New BC Residential Schools. 08 New BC Residential Schools has been started to function in the year 2016-17. Proposal to commence the remaining 147 BC Residential Schools have been sent by Karnataka Residential Education Institutes Society on 23-12-2017. In this proposal a new BC Morarji Desai Residential School is proposed at

		ಸಂಸ್ಥೆಗಳ ಸಂಘವು ದಿ:23-12-2017ರಂದು ಪ್ರಸ್ತಾವನೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ. ಈ ಪ್ರಸ್ತಾವನೆಯಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರುಗೋಡು ಹೋಬಳಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಒಂದು ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮಂಜೂರು ಮಾಡುವ ಬಗ್ಗೆ ಸಂಘವು ಪ್ರಸ್ತಾಪಿಸಿದ್ದು, ಪರಿಶೀಲನೆಯಲ್ಲಿದೆ. ಜನಸಂಖ್ಯೆ ಹಾಗೂ ವಸತಿ ಶಾಲೆಯ ಅವಶ್ಯಕತೆಗನುಗುಣವಾಗಿ ಮಂಜೂರು ಮಾಡಲು ಕ್ರಮ ವಹಿಸಲಾಗುತ್ತಿದೆ.	Murgodu village of Saudatti Taluk, Belavagi District. The proposal under process and sanction is being accorded defending upon the BC Population and need for the Residential School.

ಸಂಖ್ಯೆ: ಹಿಂವಕ 1252 ಬಿಎಂಎಸ್ 2018

(ಸಿ. ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

8

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1020
ಸದಸ್ಯರ ಹೆಸರು	ಶ್ರೀ ಸಿದ್ದು ಸವದಿ
ಉತ್ತರಿಸುವ ದಿನಾಂಕ	14.12.2018
ಉತ್ತರಿಸುವ ಸಚಿವರು	ಕೃಷಿ ಸಚಿವರು

ಪ್ರಶ್ನೆ	ಉತ್ತರ
ಅ) ಕೃಷಿ ಇಲಾಖೆಯಿಂದ ರೈತರಿಗಾಗಿ ರೂಪಿಸಿರುವ ಯೋಜನೆಗಳು ಯಾವುವು?	ಕೃಷಿ ಇಲಾಖೆಯಿಂದ ರೈತರಿಗಾಗಿ ರೂಪಿಸಿರುವ ಯೋಜನೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. The Details of schemes that are formulated for farmers are furnished in Annexure -1.
ಆ) ರೈತರಿಗೆ ರಿಯಾಯಿತಿ ದರದಲ್ಲಿ ಉಪಕರಣಗಳನ್ನು ವಿತರಿಸಲಾಗುವುದೇ?	ಹೌದು Yes
ಇ) 2018-19ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ನಿಗದಿಪಡಿಸಿರುವ ಅನುದಾನವೆಷ್ಟು? ಖರ್ಚಾದ ಅನುದಾನವೆಷ್ಟು? (ಕ್ಷೇತ್ರವಾರು ಮಾಹಿತಿ ಒದಗಿಸುವುದು)	ಕೃಷಿ ಇಲಾಖೆಗೆ ಸಂಬಂಧಿಸಿದ ಕ್ಷೇತ್ರವಾರು ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. Constituency wise details pertaining to Agriculture department are furnished in Annexure -2 ಜಲಾನಯನ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಕ್ಷೇತ್ರವಾರು ವಿವರಗಳನ್ನು **ಅನುಬಂಧ-2ಎ** ರಲ್ಲಿ ನೀಡಲಾಗಿದೆ. Constituency wise details pertaining to Watershed Development department are furnished in Annexure -2A
ಈ) ಕೃಷಿ ಇಲಾಖೆಯಿಂದ ರೈತರು ಯಾವ ಯಾವ ಯೋಜನೆಗಳಿಗೆ ಸಹಾಯಧನ ಪಡೆಯಬಹುದು? ಅದಕ್ಕೆ ಇರುವ ನಿಯಮಗಳೇನು? (ಪೂರ್ಣ ಮಾಹಿತಿ ಒದಗಿಸುವುದು)	ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. The Details of schemes that are formulated for farmers are furnished in Annexure -1.
ಉ) ಈ ವರ್ಷ ಬರಗಾಲವಿದ್ದು, ಇಲಾಖೆಯಿಂದ ವಿಶೇಷ ಯೋಜನೆಯನ್ನು ಜಾರಿಗೆ ತರಲಾಗಿದೆಯೇ?	ಬರಪರಿಸ್ಥಿತಿಯನ್ನು ಎದುರಿಸಲು ಇಸ್ರೇಲ್ ಮಾದರಿ ಕೃಷಿ ತಾಂತ್ರಿಕತೆ ಗುಚ್ಛಗಳ ಅಭಿವೃದ್ಧಿ ಹಾಗೂ ಶೂನ್ಯ ಬಂಡವಾಳ ಸಹಜ ಕೃಷಿ ಎಂಬ ಎರಡು ಹೊಸ ಯೋಜನೆಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. Two programmes viz: Development of Israel Model Agriculture Technology clusters and Zero Budget Natural Farming are being implemented to face drought situation.

ಊ) ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಎಷ್ಟು ರೈತರು ನೊಂದಾಯಿಸಿಕೊಂಡಿದ್ದಾರೆ?

ರಾಜ್ಯದಲ್ಲಿ 2016-17, 2017-18 ಮತ್ತು 2018-19 ರಲ್ಲಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ನೊಂದಾಯಿಸಿದ ರೈತರ ಸಂಖ್ಯೆಯ ವಿವರ ಕೆಳಕಂಡಂತಿದೆ.

ವರ್ಷ ಮತ್ತು ಹಂಗಾಮು	ನೋಂದಣಿಯಾದ ರೈತರ
2016-17ರ ಮುಂಗಾರು	9.44
2016-17ರ ಹಿಂಗಾರು & ಬೇಸಿಗೆ	17.42
2017-18ರ ಮುಂಗಾರು	13.33
2017-18ರ ಹಿಂಗಾರು & ಬೇಸಿಗೆ	0.22
2018-19ರ ಮುಂಗಾರು	12.22
2018-19ರ ಹಿಂಗಾರು (05.12.2018	3.38

Under KRS-PMFBY during 2016-17, 2017-18 and 2018-19, number of farmers enrolled details are as below:

Year and Season	**Number of farmers enrolled**
2016-17 Kharif	9.44
2016-17 Rabi and Summer	17.42
2017-18 Kharif	13.33
2017-18 Rabi and Summer	0.22
2018-19 Kharif	12.22
2018-19 Rabi (as on	3.38

ಸಂಖ್ಯೆ: ಕೃಇ 152 ಕೃಯೋಕಾ 2018

(ಎನ್.ಎಚ್.ಶಿವಶಂಕರ ರೆಡ್ಡಿ)
ಕೃಷಿ ಸಚಿವರು

ಅನುಬಂಧ-1

ಕೃಷಿ ಇಲಾಖೆಯಿಂದ ರೈತರಿಗಾಗಿ ರೂಪಿಸಿರುವ ಯೋಜನೆಗಳ ವಿವರ

ರಾಜ್ಯ ವಲಯ ಯೋಜನೆಗಳು

1.ಅನುಸೂಚಿತ ಜಾತಿಗಳ ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 2016-17ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಉಳಿಕೆಯಾದ ಅನುದಾನವನ್ನು 2018-19ನೇ ಸಾಲಿನಲ್ಲಿ ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಗುತ್ತಿದೆ.

2. **ಕೃಷಿ ಭಾಗ್ಯ:** ಮಳೆ ಆಶ್ರಿತ ರೈತರನ್ನು ಕೇಂದ್ರೀಕರಿಸಿ ಮಳೆ ನೀರು ಸಂಗ್ರಹಣೆ ಮತ್ತು ಪುನರ್ ಬಳಕೆಗೆ ಆದ್ಯತೆ ನೀಡಿ ಕೃಷಿ ಭಾಗ್ಯ ಯೋಜನೆಯನ್ನು ಪ್ರಸಕ್ತ ರಾಜ್ಯದ 25 ಜಿಲ್ಲೆಗಳ 132 ತಾಲ್ಲೂಕುಗಳಲ್ಲಿ, ಕರಾವಳಿ ಮತ್ತು ಮಲೆನಾಡು ಪ್ರದೇಶಗಳು ಒಳಗೊಂಡಂತೆ (ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯ ವಿವಿಧ ಘಟಕಗಳಾದ ನೀರು ಸಂಗ್ರಹಣಾ ರಚನೆಗಳು [ಕೃಷಿ ಹೊಂಡ], ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿ, ನೀರು ಎತ್ತಲು ಡೀಸಲ್/ಸೋಲಾರ್ ಪಂಪ್‌ಸೆಟ್, ನೀರು ಹಾಯಿಸಲು ಲಘು ನೀರಾವರಿ ಘಟಕ, ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (Shadenet), ಒಣ ಬೇಸಾಯ ಪದ್ಧತಿ (Recharge of functional borewells) ಅನುಷ್ಠಾನಕ್ಕೆ ಒದಗಿಸಲಾಗುತ್ತಿದೆ. ವಿಶೇಷ ಪ್ಯಾಕೇಜನ್ನು 23 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

3. **ಇತರೆ ಕೃಷಿ ಯೋಜನೆಗಳು:**

ಅ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರಧನ ಮತ್ತು ಹಾವು ಕಡಿತಕ್ಕೆ ಪರಿಹಾರ : ಈ ಕಾರ್ಯಕ್ರಮದಡಿ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ರೂ.5.00 ಲಕ್ಷ ಪರಿಹಾರ ಧನವನ್ನು ನೀಡಲಾಗುತ್ತಿದೆ. ಹಾವು ಕಡಿತದಿಂದ, ಮರಗಳಿಂದ ಬಿದ್ದು ಹಾಗೂ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರ ಪ್ರತಿ ಅರ್ಹ ಕುಟುಂಬಕ್ಕೆ ರೂ.2.00 ಲಕ್ಷ ಪರಿಹಾರ ಧನ ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ/ ಬಣವೆಗಳು ನಷ್ಟವಾದಲ್ಲಿ ಗರಿಷ್ಠ ರೂ.20,000/- ಸಹಾಯಧನ ನೀಡಲಾಗುತ್ತಿದೆ.

ಇ. ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ್ ಪ್ರಶಸ್ತಿ : ರೈತರಿಗೆ ಉತ್ಪಾದನಾ ಬಹುಮಾನಗಳು-ರಾಜ್ಯದ ರೈತರಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಮನೋಭಾವ ಉಂಟುಮಾಡಲು ತಾಲ್ಲೂಕುಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಬೆಳೆ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಲಾಗುತ್ತಿದೆ. ಕೃಷಿ ಕ್ಷೇತ್ರದಲ್ಲಿ ಅಮೂಲ್ಯ ಅನ್ವೇಷಣೆ ಹಾಗೂ ಸೃಜನಾತ್ಮಕ ಕಾರ್ಯಗಳನ್ನು ಕೈಗೊಂಡ ರೈತರನ್ನು ಗುರುತಿಸಿ ಅವರುಗಳಿಗೆ ಪಶಸ್ತಿ ನೀಡಲಾಗುತ್ತಿದೆ. ರಾಜ್ಯಮಟ್ಟದ ವಿಜೇತರನ್ನು ಸನ್ಮಾನಿಸುವ ಸಂಬಂಧ ತಗಲುವ ಎಲ್ಲಾ ವೆಚ್ಚಗಳನ್ನು ಭರಿಸಲಾಗುತ್ತದೆ(ಬಹುಮಾನ, ಸಮಾರಂಭ ಆಯೋಜನೆ, ಇತ್ಯಾದಿ).

ಈ. ಬೆಳೆ ಸಾಲಕ್ಕೆ ಸಹಾಯಧನ: ರಾಜ್ಯದ ರೈತರಿಗೆ ನೀಡಿದ ಬೆಳೆ ಸಾಲ/ಅಲ್ಪಾವಧಿ ಸಾಲಕ್ಕೆ ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದ ರೈತರಿಗೆ ಶೇ.1ರ ಬಡ್ಡಿ ರಿಯಾಯಿತಿ ನೀಡಲು (ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳು ಹಾಗು ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಗರಿಷ್ಟ ರೂ.

1.00 ಲಕ್ಷ ಮಿತಿಯೊಳಗೆ) ಬಳಸಿಕೊಳ್ಳಲಾಗುತ್ತಿದೆ. ಶೂನ್ಯ ಬಡ್ಡಿಯಲ್ಲಿ ರೂ. 3.00 ಲಕ್ಷದವರೆಗೆ ಮತ್ತು ಶೇ. 3 ರ ಬಡ್ಡಿ ದರದಲ್ಲಿ ರೂ.10.00 ಲಕ್ಷದವರೆಗೆ ರೈತರಿಗೆ ಬೆಳೆ ಸಾಲ ನೀಡಲಾಗುತ್ತಿದೆ.

ಉ. ಆಹಾರ ಸಂಸ್ಕರಣೆಗೆ ಮತ್ತು ಕೃಷಿ ಬಂಡವಾಳ ಹೂಡಿಕೆ : ಈ ಕಾರ್ಯಕ್ರಮದಡಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಮೂಲ ಸೌಕರ್ಯವನ್ನು ಒದಗಿಸಲು, ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು, ಶೀತಲ ಗೃಹಗಳ ನಿರ್ಮಾಣ, ಉಗ್ರಾಣ ನಿರ್ಮಾಣ ಹಾಗೂ ಮಾರುಕಟ್ಟೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಹಾಗೂ ಇತರೆ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

ಊ. ಕೃಷಿ ಬೆಲೆ ಆಯೋಗ: ಕೃಷಿ ಉತ್ಪನ್ನಗಳಿಗೆ ಪ್ರತಿಫಲ ಬೆಲೆ ಒದಗಿಸುವುದು, ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಹೆಚ್ಚಿನ ಉತ್ಪಾದನೆ ಸಮಯದಲ್ಲಿ ಮಾರುಕಟ್ಟೆ ಮಧ್ಯಪ್ರವೇಶ, ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಚೌಕಾಶಿ ಸಾಮರ್ಥ್ಯ ಮತ್ತು ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರ ಮೂಲಕ ಕೃಷಿ ಸಮೂದಾಯದ ಮೂಲ ಉದ್ದೇಶವಾಗಿರುತ್ತದೆ.

ಋ.ನೆಲಗಡಲೆ ವಿಶೇಷ ಪ್ಯಾಕೇಜ್ (ಹೊಸ ಕಾರ್ಯಕ್ರಮ): ಇತ್ತೀಚೆಗೆ ಎಣ್ಣೆಬೀಜ ಬೆಳೆ ಬೆಳೆಯುವ ಕ್ಷೇತ್ರವು ಇಳಿಮುಖವಾಗುತ್ತಿರುವ ಪ್ರವೃತ್ತಿಯನ್ನು ಸುಧಾರಿಸಲು ನೆಲಗಡಲೆ ಬೆಳೆ ಬೆಳೆಯುವ ರೈತರಿಗೆ ಸಹಾಯ ಮಾಡಲು ಮತ್ತು ಹೆಚ್ಚು ನೆಲಗಡಲೆಯನ್ನು ಉತ್ಪಾದಿಸಲು ನೆಲಗಡಲೆ ವಿಶೇಷ ಪ್ಯಾಕೇಜ್‌ನ್ನು ಪ್ರಾರಂಭಿಕವಾಗಿ ತುಮಕೂರು ಜಿಲ್ಲೆಯ ಪಾವಗಡ, ಸಿರಾ ಮತ್ತು ಮಧುಗಿರಿ ತಾಲ್ಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಮತ್ತು ಚಳ್ಳಕೆರೆಯಲ್ಲಿ ರೂಪಿಸಲಾಗಿದೆ.

4. ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ:

ಅ. ಮಣ್ಣು ಆರೋಗ್ಯ ಅಭಿಯಾನ: ರಾಜ್ಯದ ಎಲ್ಲಾ ರೈತ ಹಿಡುವಳಿದಾರರಿಗೆ ಪ್ರತಿ 2 ವರ್ಷಗಳಿಗೊಮ್ಮೆ ಮಣ್ಣು ಆರೋಗ್ಯ ಚೀಟಿ ವಿತರಿಸುವುದು ಹಾಗೂ ಪೋಷಕಾಂಶಗಳ ಕೊರತೆ ನೀಗಿಸಲು, ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರ ಬಳಕೆ ಮಾಡಲು ಅಭಿಯಾನ ರೂಪದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ. ಬೀಜಗಳ ಪೂರೈಕೆ: ಈ ಕಾರ್ಯಕ್ರಮದಡಿ ರಾಜ್ಯದ ಸಾಮಾನ್ಯ ವರ್ಗದ ರೈತರಿಗೆ ಶೇ.50 ರ ರಿಯಾಯಿತಿ ದರದಲ್ಲಿ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಶೇ. 75ರ ರಿಯಾಯಿತಿ ದರದಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ ಬೆಳೆಗಳ ಪ್ರಮಾಣಿತ/ನೀಜಚೀಟಿ ಬಿತ್ತನೆ ಬೀಜಗಳನ್ನು ವಿತರಸಲಾಗುತ್ತಿದೆ.

ಇ. ಸಸ್ಯ ಸಂರಕ್ಷಣೆ – ಈ ಕಾರ್ಯಕ್ರಮದಡಿ ರಾಜ್ಯದಲ್ಲಿ ಬೆಳೆಯುವ ಕೃಷಿ ಬೆಳೆಗಳನ್ನು ಬಾಧಿಸುವ ಕೀಟ/ರೋಗಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ಸಂಗ್ರಹಿಸಿದ ಧಾನ್ಯಗಳನ್ನು ಕೀಟ/ರೋಗಗಳಿಂದ ಸಂರಕ್ಷಿಸಲು, ರಿಯಾಯಿತಿಯಲ್ಲಿ ಜೈವಿಕ ಪೀಡೆನಾಶಕ, ಜೈವಿಕ ನಿಯಂತ್ರಣಾಕಾರಕಗಳ, ವೈಜ್ಞಾನಿಕ ಧಾನ್ಯ ಸಂಗ್ರಹಣೆಗಾಗಿ ಸುಧಾರಿತ ಪೆಟ್ಟಿಗೆಗಳ, ಅವಶ್ಯಕತೆಗೆ ಅನುಗುಣವಾಗಿ ಕೀಟ/ ರೋಗ ನಿರ್ವಹಣೆಗೆ ಶೇ.50ರ ರಿಯಾಯಿತಿಯಲ್ಲಿ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಶೇ.75ರ ರಿಯಾಯಿತಿ ದರದಲ್ಲಿ ಪೀಡೆನಾಶಕಗಳ ವಿತರಣೆ ಮಾಡಲಾಗುತ್ತಿದೆ. ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಕಾಯ್ದೆ ಮತ್ತು ಕಾನೂನು ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಗುಣ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು

ಹಾಗೂ ಬೀಜೋಪಚಾರ ಆಂದೋಲನ ಮತ್ತು ಸುರಕ್ಷಿತ ಕೀಟನಾಶಕಗಳ ಬಳಕೆ ಕುರಿತು ತರಬೇತಿ ನೀಡಲಾಗುತ್ತಿದೆ.

ಈ. ಮಣ್ಣಿನ ಸತ್ವ ಹೆಚ್ಚಿಸುವಿಕೆ: ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚಿಸಲು ರಿಯಾಯಿತಿ ದರದಲ್ಲಿ ಕೃಷಿ ಪರಿಕರಗಳ ವಿತರಣೆ (ಹಸಿರೆಲೆ ಗೊಬ್ಬರ ಬೀಜ, ಜಿಪ್ಸಂ / ಕೃಷಿ ಸುಣ್ಣ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು), ಸಾವಯವ ಗೊಬ್ಬರಗಳ ವಿತರಣೆ (ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್), ಸಾವಯವ ಗೊಬ್ಬರಗಳ ಉತ್ಪಾದನೆಗೆ ಪ್ರೋತ್ಸಾಹಧನ (ಬಯೋಡೈಜೆಸ್ಟರ್ ಘಟಕ ಸ್ಥಾಪನೆ, ಕಡಿಮೆ ವೆಚ್ಚದ ಎರೆಹುಳು ಗೊಬ್ಬರ ಉತ್ಪಾದನಾ ಘಟಕ ಸ್ಥಾಪನೆ). ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಶೇ. 75ರ ರಿಯಾಯಿತಿ ದರದಲ್ಲಿ ಮೇಲಿನ ಕೃಷಿ ಪರಿಕರಗಳನ್ನು ವಿತರಿಸಲಾಗುತ್ತಿದೆ.

ಉ. ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣೆ : ಈ ಯೋಜನೆಯಡಿ ರೈತರಿಗೆ ಸಣ್ಣ ಟ್ರಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ನಾಟಿ/ಬಿತ್ತನೆ ಉಪಕರಣಗಳು, ಕುಯ್ಲು ಮತ್ತು ಒಕ್ಕಣೆ ಉಪಕರಣಗಳು, ಡೀಸೆಲ್ ಪಂಪು ಸೆಟ್ಟು, ಅಂತರ ಬೇಸಾಯ ಉಪಕರಣಗಳು ಹಾಗೂ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಕೃಷಿ ಸಂಸ್ಕರಣೆ ಘಟಕಗಳು ಹಾಗೂ ಟಾರ್ಪಾಲಿನ್ ಸಹಾಯಧನದಡಿ ವಿತರಿಸಲಾಗುತ್ತಿದೆ. ರೂ.2.00 ಲಕ್ಷದವರೆಗೆ ಇರುವ ಕೃಷಿ ಯಂತ್ರೋಪಕರಣಗಳನ್ನು ಪ್ರತಿ ರೈತ ಫಲಾನುಭವಿಗಳಿಗೆ ನೀಡಲಾಗುತ್ತಿದ್ದು, ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.1.00 ಲಕ್ಷದವರೆಗೆ ಹಾಗೂ ಸಣ್ಣ ಟ್ರಾಕ್ಟರ್‌ಗಳಿಗೆ ರೂ.75,000/- ಸಹಾಯಧನ ನೀಡಲಾಗುತ್ತಿದೆ. ರೂ.5.00ಲಕ್ಷದವರೆಗೆ ಇರುವ ಕೃಷಿ ಉಪಕರಣಗಳನ್ನು ನೋಂದಾಯಿತ ರೈತ ಗುಂಪುಗಳಿಗೆ ಹಾಗೂ ಎಲ್ಲಾ ತರಹದ ಉಪಕರಣಗಳನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಸಣ್ಣ ಟ್ರಾಕ್ಟರ್‌ಗಳಿಗೆ ರೂ.2.00 ಲಕ್ಷ ಸಹಾಯಧನ ಹಾಗೂ ಉಳಿದ ಕೃಷಿ ಉಪಕರಣಗಳಿಗೆ ಮತ್ತು ಕೃಷಿ ಸಂಸ್ಕರಣೆ ಘಟಕಗಳು ಹಾಗೂ ಟಾರ್ಪಾಲಿನ್‌ಗಳನ್ನು ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.1.00 ಲಕ್ಷದವರೆಗೆ ನೀಡಲಾಗುತ್ತಿದೆ.

ಊ. ಕೃಷಿ ಯಂತ್ರಧಾರೆ : ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ.

ಎ. ***ಕೃಷಿ ಯಂತ್ರೋಪಕರಣ ಸೇವಾ ಕೇಂದ್ರ:*** ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಉತ್ತೇಜಿಸಿ ಯುವ ರೈತರನ್ನು ಕೃಷಿಯತ್ತ ಸೆಳೆದು ಉದ್ಯೋಗಾವಕಾಶ ಸೃಜಿಸಲು ಹಾಗೂ ಸ್ಥಳೀಯವಾಗಿ ಕೃಷಿ ಉಪಕರಣಗಳ ದುರಸ್ತಿಗಾಗಿ ಹಾಗೂ ಲಘು ಉಪಕರಣಗಳ ತಯಾರಿಕೆಗಾಗಿ "ಗ್ರಾಮೀಣ ಕೃಷಿ ಯಂತ್ರೋಪಕರಣ ದುರಸ್ತಿ ಸೇವಾ ಕೇಂದ್ರ ಸ್ಥಾಪನೆಗಾಗಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ.

ಏ.ವಿಶೇಷ ಅಭಿವೃದ್ಧಿ ಯೋಜನೆ : ಕರ್ನಾಟಕ ಸರ್ಕಾರವು ಡಾಃ ಡಿ.ಎಂ.ನಂಜುಂಡಪ್ಪರವರ ಅಧ್ಯಕ್ಷತೆಯಲ್ಲಿ ಪಾದೇಶಿಕ ಅಸಮತೋಲನ ನಿರ್ವಹಣಾ ಉನ್ನತ ಸಮಿತಿಯು 114 ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿ ವರದಿ ನೀಡಿದೆ. ಅದರಲ್ಲಿ 39 ತಾಲ್ಲೂಕುಗಳು ಅತ್ಯಂತ ಹಿಂದುಳಿದಿದ್ದು 40 ತಾಲ್ಲೂಕುಗಳು ಅತಿ ಹಿಂದುಳಿದಿದ್ದು ಹಾಗೂ 35 ತಾಲ್ಲೂಕುಗಳು ಹಿಂದುಳಿದಿವೆ. ಈ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ಧಿ ಅನುದಾನವನ್ನು ಒದಗಿಸಲಾಗಿರುತ್ತದೆ.

